ಅಧ್ಯಕ್ಷರು: ನಾನು ಈಗ ಹೇಳುತ್ತಿದ್ದೇನೆ, ಅವರು ಯಾವ ಪದಗಳನ್ನು ಉಪಯೋಗಿಸಿದ್ದಾರೆ ಅದರಲ್ಲಿ ಯಾವುದು ಪಾರ್ಲಿಮೆಂಟರಿ, ಯಾವುದು ಪಾರ್ಲಿಮೆಂಟರಿ ಅಲ್ಲ ಎಂಬ ಬಗ್ಗೆ ನೋಡಿಸಬೇಕಾಗುತ್ತದೆ. ಅದನ್ನು ನೋಡಿಸಿ ತೆಗೆಸಿ ಹಾಕುತ್ತೇನೆ ಎನ್ನುವ ಭರವಸೆಯನ್ನು ಕೊಟ್ಟರೂ ಕೂಡ ನೀವು ಈ ರೀತಿ ಮಾಡುವುದು ಸರಿಯಲ್ಲ. ಈ ರೀತಿ ಮಾಡುವುದು ಗೌರವಕ್ಕೆ ಬರುವುದಿಲ್ಲ. ನಾನು ನೋಡಿ ಅನ್-ಪಾರ್ಲಿಮೆಂಟರಿ ಇದ್ದರೆ ತೆಗೆಸಿ ಹಾಕುತ್ತೇನೆ. ಆದರೆ ಅದನ್ನು ನೋಡುವುದಕ್ಕಾದರೂ ನನಗೆ ಸಮಯ ಬೇಡವೇ? ನೀವು ಹೇಳಿದ ತಕ್ಷಣವೇ ಅದನ್ನು ಮಾಡುವುದಕ್ಕಾಗುತ್ತದೆಯೇ? ನೀವು ಈ ರೀತಿ ಮಾಡುವುದು ಯಾರಿಗೂ ಗೌರವ ತರುವಂಥದ್ದಲ್ಲ. ಸದನದ ಸಭೆಗೂ ಗೌರವ ಇದೆ. ನಾನು ಮತ್ತೆ ಮತ್ತೆ ಹೇಳುತ್ತಿದ್ದೇನೆ, ಯಾರೇ ಅನ್-ಪಾರ್ಲಿಮೆಂಟರಿ ಪದಗಳನ್ನು ಉಪಯೋಗ ಮಾಡಿರಲಿ, ಅದನ್ನು ತೆಗಿಸಿಹಾಕುತ್ತೇನೆ. ನೀವು ಸಹಕರಿಸಬೇಕು. ಆದರೆ ನೀವು ಈ ರೀತಿ ಮಾಡುವುದು ಸರಿಯಲ್ಲ. ಈಗ ಸದನವನ್ನು ಮಧ್ಯಾಹ್ನ 3-30ಕ್ಕೆ ಸೇರುವಂತೆ ಭೋಜನಕ್ಕಾಗಿ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 2 ಗಂಟೆ 11 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3-30ಕ್ಕೆ ಸೇರುವಂತೆ ನಿರ್ಧರಿಸಿತು)

ಸದನವು ಪುನಃ ಮಧ್ಯಾಹ್ನ 3.50 ಗಂಟೆಗೆ ಸಮಾವೇಶಗೊಂಡಿತು
ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು
(ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

ವಿಷಯ: ಸನ್ಮಾನ್ಯ ಸಭಾಧ್ಯಕ್ಷರ ತೀರ್ಪನ್ನು ಪುನರ್ ವಿಮರ್ಶಿಸಲು ಮನವಿ.

ಅಧ್ಯಕ್ಷರು: ಸದನದ ಬಾವಿಗೆ ಬಂದಿರುವ ಮಾನ್ಯ ಸದಸ್ಯರುಗಳೆಲ್ಲಾ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗ record ಎಲ್ಲವನ್ನೂ ನೋಡಿ ಯಾವುದು unparliamentary ಇದೆ ಅದೆಲ್ಲವನ್ನೂ ತೆಗೆದು ಹಾಕಿದ್ದೇನೆ. ಆದ್ದರಿಂದ, ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು.

(ಸದಸ್ಯರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ನಾನು ಹೇಳುವುದನ್ನು ದಯಮಾಡಿ ಕೇಳಿ. ಅವರು ಇವರ ಮೇಲೆ ಹೇಳುವುದು, ಇವರು ಅವರ ಮೇಲೆ ಹೇಳಿದರೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ಕೆಲವು ಪದ ಉಪಯೋಗಿಸಿದ್ದಾರೆ. ಇವರು ಕೆಲವು ಪದ ಉಪಯೋಗಿಸಿದ್ದಾರೆ. ಅವೆಲ್ಲವನ್ನೂ ನೋಡಿಬಿಟ್ಟು ** ಈ ಪದದ ಬಗ್ಗೆ parliamentary ಇದರಲ್ಲಿ ಇದೆಯೇ ಎಂದು ನೋಡಿ ತಿಳಿಸಿದ್ದೇನೆ. ಅದಾದಮೇಲೆ, ಉಳಿದೆಲ್ಲವನ್ನೂ

** ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ತೆಗೆಸಿಹಾಕಿದ್ದೇನೆ. Bad taste ನಲ್ಲಿ ಯಾವ್ಯಾವುದು refer ಮಾಡಿದ್ದಾರೆ, ನಿಮ್ಮ ಮೇಲೆ ಕೊಲೆ ಆಪಾದನೆ ಇದೆ, ಹಾಗಿದೆ, ಹೀಗಿದೆ, ಅದೆಲ್ಲ ತೆಗೆಸಿಹಾಕಿದ್ದೇನೆ. (ಬಾವಿಯಿಂದ ಮಾನ್ಯ ಆರ್.ವಿ. ದೇಶಪಾಂಡೆಯವರು ಮಾತನಾಡುತ್ತಿದ್ದರು) ಹಾಗಲ್ಲ ದೇಶಪಾಂಡೆಯವರೆ, ಅದೆಲ್ಲಾ ತೆಗೆಸಿಹಾಕಿದ್ದೇನೆ. ಈಗ ಏನಾಗಿದೆ, ನಿಮ್ಮ ಮೇಲೆ ಅದಿದೆ, ಅದಿದೆ ಎಂದು ಏನಿದೆ, ಅದು recordಗೆ ಹೋಗಬಾರದು, recordನಲ್ಲಿ ಇರಬಾರದೆಂದು ಆದನ್ನೆಲ್ಲ ತೆಗೆಸಿದ್ದೇನೆ.

(ಶ್ರೀ ಎ. ಕೃಷ್ಣಪ್ಪನವರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಅದೇನಾಗಿದೆ ಎಂದರೆ ಮಾನ್ಯ ಕೃಷ್ಣಪ್ಪನವರೆ, ನೀವು ಹಿರಿಯ ಸದಸ್ಯರು. ಪ್ರತಿಯೊಬ್ಬ ಸದಸ್ಯರೂ ಸಹ ಅವರು ತಿಳಿದುಕೊಂಡು ಯಾವ ಭಾಷೆ ಉಪಯೋಗಿಸಬೇಕೋ, ಅದನ್ನು ಉಪಯೋಗಿಸಬೇಕೇ ಹೊರತು ನಾನು ಏನು ಮಾಡುವುದಕ್ಕಾಗುತ್ತದೆ? ಕೆಲವನ್ನು ತೆಗೆಸಬೇಕೆಂದು ಹೇಳಿದ್ದೀರಿ, ನೋಡಿ ತೆಗೆಸಿ ಹಾಕಿಬಿಡುತ್ತೇನೆ.

(ಸದನದ ಬಾವಿಯಿಂದ ಮಾನ್ಯ ಎ. ಕೃಷ್ಣಪ್ಪನವರು ಮಾತನಾಡುತ್ತಿದ್ದರು)

(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್: ಮಾನ್ಯ ಅಧ್ಯಕ್ಷರೆ, ಈಗ ಅವರೂ ಮಾತನಾಡುತ್ತಾರೆ, ನಾವೂ ಮಾತನಾಡುತ್ತೇವೆ.

ಅಧ್ಯಕ್ಷರು: ಅಲ್ಲಾರೀ, ಅವರಿಗೂ ಅನ್ವಯವಾಗುತ್ತದೆ, ನಿಮಗೂ ಅನ್ವಯವಾಗುತ್ತದೆ, ಎಲ್ಲರಿಗೂ ಅನ್ವಯವಾಗುತ್ತದೆ. ನಾನು ಪದೇ ಪದೇ ಹೇಳುತ್ತಿದ್ದೇನೆ. ದಯಮಾಡಿ, ಮಾನ್ಯ ಸದಸ್ಯರುಗಳು ಅರ್ಥಮಾಡಿಕೊಳ್ಳಬೇಕು. ಈಗ ಏನಾಗಿದೆಯೆಂದರೆ, ಜವಾಬ್ದಾರಿಯಿಂದ ನಡೆದುಕೊಳ್ಳಿ. ತೂಕವಾಗಿ ಮಾತನಾಡಿರಿ. ಯಾರಾದರೂ ಮಾತನಾಡುವುದಿದ್ದರೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ಅವರೇನಾದರೂ ಹೇಳಿದ್ದಕ್ಕೆ ನೀವು ಏನು ಪ್ರತಿಯಾಗಿ ಹೇಳಬೇಕೋ ಹೇಳಿ. ಆದರೆ, ಇಲ್ಲಿ ಏನಾಗಿದೆಯೆಂದರೆ ಮಾತನಾಡುವುದಕ್ಕೆ ಪ್ರತಿಯೊಬ್ಬರಿಗೂ ಅವಕಾಶ ಕೊಡದಿದ್ದರೆ ತಪ್ಪಾಗುತ್ತದೆಂದು ನಾನು repeated ಆಗಿ ಹೇಳುತ್ತಿದ್ದೇನೆ. ನಾನು ಇನ್ನೇನು ಹೇಳಬಹುದು?

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) (ಸ್ವಸ್ಥಾನಕ್ಕೆ ಬಂದ ನಂತರ): ಮಾನ್ಯ ಅಧ್ಯಕ್ಷರೆ, ತಾವು ಈ ಸದನದ ಕಲಾಪಗಳ ಜವಾಬ್ದಾರಿಯನ್ನು ಹೊತ್ತಿದ್ದೀರಿ. ಯಾರೂ ಇಲ್ಲಿ ನಿಮ್ಮನ್ನು ಉಲ್ಲಂಘಿಸಿ, ನಿಮ್ಮನ್ನು ಮೀರಿ ಹೋಗುವವರು ಇರುವುದಿಲ್ಲ ಮತ್ತು ಇರಲೂ ಬಾರದು. ನ್ಯಾಯಾಲಯದ ಮುಂದಿರುವ ಒಂದು ಪ್ರಕರಣವನ್ನು ಈ ನಿಯಮಾವಳಿಗಳ ರೀತ್ಯಾ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲದಿರತಕ್ಕಂಥ ವಿಚಾರವನ್ನು ಯಾರಾದರೂ ಒಬ್ಬರು ಪ್ರಸ್ತಾಪ ಮಾಡಿದರೆ ತಮ್ಮ ಕರ್ತವ್ಯವೇನು ಮಾನ್ಯ ಅಧ್ಯಕ್ಷರೆ? ಈಗ ನಾನು ನ್ಯಾಯಾಲಯದ ಮುಂದಿರತಕ್ಕಂಥ ವಿಚಾರ, case ಯಾವಾಗ ಆಯಿತು? ಏಕಾಯಿತು? ಯಾರು

ಮಾಡಿದರು? ಏನಾಯಿತು ಎಂದು ಹೇಳುವುದಕ್ಕಾಗುವುದಿಲ್ಲ. ಅದು ತಪ್ಪಾಗುತ್ತದೆ ಅಧ್ಯಕ್ಷರೆ, sub-judice ಆಗುತ್ತದೆ. ನಿಯಮಾವಳಿಗಳಿಗೆ ವಿರೋಧವಾಗುತ್ತದೆ.**

ಅಧ್ಯಕ್ಷರು: ಮಾನ್ಯ ರಮೇಶ್ ಕುಮಾರ್‌ರವರೇ, ನಾನು ಒಂದು ಅಂಶವನ್ನು ಹೇಳುತ್ತೇನೆ. ತಾವು ಈ ಪೀಠದಲ್ಲಿ ಇದ್ದಂಥವರು. ಬೆಳಿಗ್ಗೆಯಿಂದ ಕಲಾಪ ಯಾವ ರೀತಿಯಾಗಿ ನಡೆಯಿತೆಂದು ನೀವು ನೋಡಿದ್ದೀರಿ. ನಾನು ಇಲ್ಲಿ ಎಷ್ಟೇ ಸಲ ವಿನಂತಿ ಮಾಡಿದರೂ ಸಹ ಗುಂಪು ಗುಂಪಾಗಿ ಎದ್ದು ನಿಂತುಕೊಳ್ಳತಕ್ಕಂಥದ್ದು, ಇನ್ನೇನು ಮಾಡುವುದಕ್ಕಾಗುತ್ತದೆ?

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ದಯಮಾಡಿ ಕೇಳಿ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಇಲ್ಲಿದ್ದಾರೆ. ಸಾರ್ವಜನಿಕ ಹಿತದೃಷ್ಟಿಯಿಂದ ನಮ್ಮ ನಮ್ಮ ಹೊಣೆಗಾರಿಕೆಯನ್ನು ನಿರ್ವಹಣೆ ಮಾಡಬೇಕೆಂದು ನಾವಿಲ್ಲಿಗೆ ಬರುತ್ತೇವೆ. ಅಭಿಪ್ರಾಯ ಬೇಧಗಳಿರಬಹುದು. ಎಷ್ಟೇ ತೀವ್ರವಾಗಿ ನಮ್ಮ ಅಭಿಪ್ರಾಯಗಳನ್ನು ಮಂಡಿಸಿದರೂ ಕೂಡ ನಾವ್ಯಾರೂ ಇಲ್ಲಿ ಶತ್ರುಗಳೇನೂ ಅಲ್ಲ. ಸಾರ್ವಜನಿಕ ಕೆಲಸವನ್ನು ಮಾಡಿ ವಾಪಸ್ಸು ನಮ್ಮ ಹೃದಯವನ್ನು ಹಗುರ ಮಾಡಿಕೊಂಡು ನಮ್ಮ ಕರ್ತವ್ಯ ನಾವು ಮಾಡಿದ್ದೇವೆಂದು ಮನೆಗೆ ಹೋಗತಕ್ಕಂಥದ್ದು. ಆದರೆ, ನಮ್ಮ ಕರ್ತವ್ಯ ನಿರ್ವಹಣೆ ಮಾಡುವ ವೇಳೆಗೆ ಯಾರಾದರೊಬ್ಬರು ನಿಯಮಾವಳಿಗಳನ್ನು ಉಲ್ಲಂಘಿಸಿ ನಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡದಂಥ ರೀತಿಯಲ್ಲಿ ವಾತಾವರಣ ಸೃಷ್ಟಿ ಮಾಡಿದಾಗ ಅದಕ್ಕೆ ಯಾರು ಜವಾಬ್ದಾರರು ಅಧ್ಯಕ್ಷರೆ? ಅದನ್ನು ಸರಿಪಡಿಸಬೇಕಾದವರು ಯಾರು? ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ನನಗೆ ಸಹಾಯಕ್ಕೆ ಬರಲಿ. ಅವರು ಹೇಳಲಿ. ಬೇರೆ ಯಾರಾದರೂ members ಹೊಸಬರಾದರೆ, ಆಯಿತಪ್ಪಾ, ಕುಳಿತುಕೋ, ನನಗೆ ಗೊತ್ತಿಲ್ಲವೆಂದು ಹೇಳಬಹುದು 3–4 terms ಸದನಕ್ಕೆ ಬಂದಿರತಕ್ಕಂಥ ಒಬ್ಬ ಮನುಷ್ಯ ಸಂಪುಟದ ಸಚಿವರಾಗಿರತಕ್ಕಂಥವರು. ಈ ರೀತಿ ಮಾತನಾಡಬಹುದಾ? ನಮ್ಮ ನಿಯಮಾವಳಿಗಳನ್ನು ಬದಲಾವಣೆ ಮಾಡಿ. Courtನ ವಿಚಾರ ಚರ್ಚೆ ಮಾಡಬಹುದೆಂದು ಹೇಳಿ. ನಾನು ಆ case ವಿಚಾರವನ್ನು, ಪೂರ್ಣ ವೃತ್ತಾಂತವೆಲ್ಲಾ ಇಲ್ಲಿ ಹೇಳುತ್ತೇನೆ. ಹೇಳುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಪತ್ರಿಕಾ ಸಹೋದರರು ಇಲ್ಲಿದ್ದಾರೆ. ಅವರ ಸ್ವಾತಂತ್ರ್ಯಕ್ಕೆ ನಾವು ಕೈ ಹಾಕುವುದಕ್ಕಾಗುವುದಿಲ್ಲ. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅವರದೇ ಆದಂಥ ರೀತಿಯಲ್ಲಿ ಈ ವಿಚಾರವನ್ನು ವ್ಯಾಖ್ಯಾನ ಮಾಡುತ್ತಾರೆ. ** ಇದನ್ನೆಲ್ಲಾ ಬುಟ್ಟಿಯಲ್ಲಿ ತಲೆಮೇಲೆ ಹಾಕಿಕೊಂಡು ಹೋಗುವುದಕ್ಕೆ ನಾವು ಇಲ್ಲಿಗೆ ಬರುತ್ತೇವೆಯೇ? ನಾನು ಇವತ್ತು ನೇರವಾಗಿ ನಿಮ್ಮ ಮೇಲೆ ಹೊಣೆ ಇಡುತ್ತಿದ್ದೇನೆ.

ಅಧ್ಯಕ್ಷರು: ನನ್ನ ಮೇಲೆ ಹೊಣೆ ಇಲ್ಲವೆಂದು ನಾನು ಹೇಳುವುದಿಲ್ಲ. ಮಾನ್ಯ ರಮೇಶ್ ಕುಮಾರ್‌ರವರೆ, ಆದರೆ, ನಾನು.....

** ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನಾನು ಆಪಾದನೆ ಮಾಡುತ್ತಿಲ್ಲ. ದಯಮಾಡಿ ಕೇಳಿ, ತಾವು ಅರ್ಥ ಮಾಡಿಕೊಳ್ಳಬೇಕು. ನನ್ನ ಮನಸ್ಸಿನ ಅಂತರಾಳದ ನೋವನ್ನು ತಾವು ಅರ್ಥ ಮಾಡಿಕೊಳ್ಳಬೇಕು.

(ಅಡಚಣೆ)

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು): ನಾನು ಈಗಾಗಲೇ ನಿಮಗೆ complaint ಕೊಟ್ಟಿದ್ದೇನೆ. ದಯಮಾಡಿ ವಿಚಾರಿಸಬೇಕು. ನನಗೂ ಕೂಡ ಮಾತನಾಡಲಿಕ್ಕೆ ಅವಕಾಶ ಕೊಡಬೇಕು. ಮಾನ್ಯ ರಮೇಶ್ ಕುಮಾರ್‌ರವರು ಎಷ್ಟಾದರೂ ಮಾತನಾಡಲಿ. ಅವರ ಬಗ್ಗೆ ನನಗೆ ಗೌರವವಿದೆ. ಆದರೆ, ಅವರು ಮಾತನಾಡಿದ ನಂತರ ನನಗೂ ಸಹ ಮಾತನಾಡಲಿಕ್ಕೆ ಅವಕಾಶ ಕೊಡಬೇಕು. ಅವರು ಒಂದು ಗಂಟೆಯಾದರೂ ಮಾತನಾಡಲಿ. ನಾವು ಕೇಳುತ್ತೇವೆ. ಆದರೆ, ಅವರು ಮಾತನಾಡಿದ ನಂತರ ನನಗೂ ಕೂಡ ಮಾತನಾಡಲಿಕ್ಕೆ ಅವಕಾಶ ಕೊಡಬೇಕೆಂದು ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಸಂತೋಷವಾಗಿ ಕೊಡಿ ಸ್ವಾಮಿ. ಆ ಹಕ್ಕು ನಿಮಗಿದೆ. ಮಾತನಾಡುವ ಹಕ್ಕು ಅವರಿಗಿದೆ. ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಡಿ ಎಂದು ನಾನು ಹೇಳಲಿಲ್ಲ. ಅವರಿಗೆ ಮಾತನಾಡಬೇಡಿ ಎಂತಲೂ ನಾನು ಹೇಳಲಿಲ್ಲ. ಸಂತೋಷವಾಗಿ ಆಡಲಿ. ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ, Parliamentary Affairs Minister ರವರು ಸದನದಲ್ಲಿ ಕುಳಿತಿದ್ದಾರೆ. He has a bigger responsibility. ಈ ತರಹದ ವಿಚಾರಗಳನ್ನು ಯಾವುದು adjudication ನಲ್ಲಿದೆ, ಯಾವುದು Tribunal ಮುಂದೆ ಇದೆ, ಯಾವುದು Court ಮುಂದಿದೆ, ಅಂಥ ವಿಚಾರಗಳನ್ನು ಪ್ರಸ್ತಾಪ ಮಾಡಬಹುದೇ? ಅವರಾದರೂ ಹೇಳಬೇಕು. ಸದಸ್ಯರಿಗಾದರೂ ತಿಳುವಳಿಕೆ ಇರಬೇಕು.

ಶ್ರೀ ಎಂ.ಪಿ. ವೆಂಕಟೇಶ್: ರಾಜ್ಯಪಾಲರ ಬಗ್ಗೆ ಇವರು ಮಾತನಾಡುವಾಗ ಅದು ನಿಯಮಾನುಸಾರ ಇತ್ತೇ? ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ನಿಯಮಾನುಸಾರ ಇದ್ದರೆ ಹೇಳಿಬಿಡಿ. ರಾಜ್ಯಪಾಲರ ಬಗ್ಗೆ ಇವರೇನು ವಿಚಾರ ಮಾತನಾಡಿದರು, ಎಷ್ಟು ಹಗುರವಾಗಿ ಮಾತನಾಡಿದರು, ಇದಕ್ಕೆ ನಿಯಮ ಇದೆಯೇ?

(ಅಡಚಣೆ)

ಅಧ್ಯಕ್ಷರು: ವೆಂಕಟೇಶ್‌ರವರೇ, ಸುಮ್ಮನೆ ಕುಳಿತುಕೊಳ್ಳಿ, ಅವರೇನೋ ಮಾತನಾಡುತ್ತಿದ್ದಾರೆ ದಯಮಾಡಿ ಕುಳಿತುಕೊಳ್ಳಿ.

(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್: ... ಇವರು ಆಡಳಿತ ಮಾಡುವುದಕ್ಕೆ ಬಿಡುತ್ತಿಲ್ಲ. ಇವರಿಗೆ ಸಮಾಧಾನವಿಲ್ಲ. ಇವರದ್ದು ಯಾವಾಗಲೂ ಸುಮ್ಮನೆ ತಕರಾರು.

(ಅಡಚಣೆ)

ಅಧ್ಯಕ್ಷರು: ಕುಳಿತುಕೊಳ್ಳಿ.

(ಅಡಚಣೆ)

ಶ್ರೀ ಕೆ.ಆರ್. ರಮೇಶ್ ಕುಮಾರ್: ಶ್ರೀಮಾನ್ ವೆಂಕಟೇಶ್‌ರವರೂ ಕೂಡ ಯಾವ್ಯಾವ ನಿಯಮಗಳನ್ನು ಹೇಳುತ್ತಾರೆ, ನಾವು ಎಲ್ಲಿ ಲೋಪ ಮಾಡಿದ್ದೇವೆ, ಎಲ್ಲಿ ಎಡವಿದ್ದೇವೆನ್ನುವುದೆಲ್ಲವನ್ನೂ ಹೇಳಲಿ. ಒಂದು ವೇಳೆ ತಪ್ಪಾಗಿದ್ದರೆ, ಅವರಿಗೂ ಗೌರವ ಸೂಚಿಸಿ ತಿದ್ದಿಕೊಳ್ಳುತ್ತೇವೆ. ನಾವೇನು ಪಂಡಿತರಪ್ಪಾ, ನಮಗೆ ಗೊತ್ತಿರಲಾರದ ವಿಚಾರ ಯಾವುದೂ ಇಲ್ಲ, ಇನ್ನು ಯಾರೂ ತಿಳುವಳಿಕಸ್ಥರು ಇಲ್ಲ ಎನ್ನುವ ಮಾತನ್ನು ನಾವು ಹೇಳಿಲ್ಲ. ಈ ಸದನದಲ್ಲಿ ಅತ್ಯಂತ ಕಡೆಯವರಲ್ಲಿ ಕಡೆಯವನು ಎನ್ನುವ ಭಾವನೆಯಿಂದ ನಾನು ಕೆಲಸ ಮಾಡುತ್ತೇನೆ. ನಾವೇನೂ ಅವರಿಗೆ ಹೇಳಲಿಲ್ಲವಲ್ಲಾ, ಏಕೆ ಅವರು ಮೈಮೇಲೆ ಹಾಕಿಕೊಳ್ಳುತ್ತಾರೆ? ಅವರು, ನಾವು ಮಾಡಿರತಕ್ಕಂಥ ತಪ್ಪೇನಾದರೂ ಇದ್ದರೆ ಹೇಳಲಿ. ತಿದ್ದಿಕೊಳ್ಳುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಇವರೆಲ್ಲಾ well ನಲ್ಲಿದ್ದಾರೆ. ಸಭೆ order ನಲ್ಲಿ ಇದೆ ಎನ್ನುವುದಾದರೆ ಸರಿ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅದಕ್ಕಾಗಿಯೇ ವಿನಂತಿ ಮಾಡಿಕೊಳ್ಳುತ್ತೇವೆ. ಆ ಸಮಯ ಬರುತ್ತದೆ. ಈಗ ಅವರು ಬಾವಿಯಲ್ಲಿ ಧರಣಿ ಬಿದ್ದಿರತಕ್ಕಂಥದ್ದನ್ನು ಹಿಂದಕ್ಕೆ ತೆಗೆದುಕೊಂಡಿಲ್ಲ. ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕಾಗಿ ತಮ್ಮ ಸ್ಥಾನಕ್ಕೆ ಮಾನ್ಯ ರಮೇಶ್ ಕುಮಾರ್‌ರವರು ಹೋಗಿದ್ದಾರೆ. ನೀವು ವ್ಯಾಕರಣವನ್ನು ತಿದ್ದಿದ್ದಕ್ಕಾಗಿ ಧನ್ಯವಾದಗಳು. ಬೀಳುವುದು ಮತ್ತು ನಿಲ್ಲುವುದು ಎರಡೂ ಒಂದೇ. ಏಕೆಂದರೆ, ಬಾವಿಯಲ್ಲಿ ನಿಲ್ಲುವುದಕ್ಕೆ ಬರುವುದಿಲ್ಲ. ಬಾವಿಯಲ್ಲಿ ನಿಂತರೆ ಮುಳುಗಿಬಿಡುತ್ತೇವೆ. ಆದ್ದರಿಂದ, ಇಲ್ಲಿ ಸದನಕ್ಕೆ ಬಹಳ ದೊಡ್ಡ ಗೌರವವಿದೆ ಮತ್ತು ಎಲ್ಲಾ ನಮ್ಮ ಸದಸ್ಯರು ಪ್ರತಿ ಸಂದರ್ಭದಲ್ಲಿಯೂ ಕೂಡ ಹಿರಿಯರ ಆದರ್ಶಗಳನ್ನು, ಹಿರಿಯರು ನಡೆದುಕೊಂಡ ರೀತಿಯಲ್ಲಿ ನಾವು ಪರಿಪಾಲಿಸುತ್ತಾ ಬಂದಿದ್ದೇವೆ. ಬೇರೆ ಬೇರೆ ವಿಧಾನ ಸಭೆಗಳಿಗೆ ಹೋಲಿಸಿದಾಗ ನಮ್ಮ ಕರ್ನಾಟಕದ ವಿಧಾನಸಭೆಗೆ ಬಹಳ ದೊಡ್ಡ ಗೌರವವಿದೆ. ನಾನು ಮಾನ್ಯ ರಮೇಶ್ ಕುಮಾರ್‌ರವರು ಪ್ರಸ್ತಾಪ ಮಾಡಿದ ವಿಷಯವನ್ನು ಸಂಪೂರ್ಣ ಒಪ್ಪುತ್ತೇನೆ. ಯಾವುದು Courtನಲ್ಲಿ ವಿವಾದವಿದೆ, ಆ ವಿಚಾರಗಳ ಬಗ್ಗೆ ನಾವು ಮಾತನಾಡತಕ್ಕಂಥದ್ದು sub-judice ಆಗುತ್ತದೆ. ಮತ್ತೆ, ಅದರಲ್ಲಿ ಯಾವುದೇ ವಿಚಾರಗಳನ್ನು ನಾವು ಪ್ರಸ್ತಾಪಿಸಬೇಕಾಗಿರತಕ್ಕಂಥ ಅಗತ್ಯವಿಲ್ಲ. ಆ ವಿಚಾರಕ್ಕೆ, ಆ ಮಟ್ಟಿಗೆ ನಾನು ಸಂಪೂರ್ಣವಾಗಿ ಸಹಮತವನ್ನು ವ್ಯಕ್ತಮಾಡುತ್ತೇನೆ. ಮಾನ್ಯ ಜಯಕುಮಾರ್‌ರವರು ಪ್ರಸ್ತಾಪ ಮಾಡುವಾಗ ಮಧ್ಯೆ ಮಧ್ಯೆದಲ್ಲಿ ನಾವೇನು ಭಾಗವಹಿಸಿ ಮಾತನಾಡುತ್ತೇವೆ, ಆದರೆ ನನಗೆ ನೋಡಿ, ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುವಾಗ ನಾವು ಎದ್ದು ನಿಲ್ಲಲು ಸಾಧ್ಯವಾಗಲಿಲ್ಲ. ಆ

ಸಂದರ್ಭದಲ್ಲಿ ಅವರು ಇನ್ನೂ ಹೇಳಬೇಕಾದಂಥ ಅನೇಕ ವಿಷಯಗಳು ಇದ್ದವು. ಆದ್ದರಿಂದ, ನಾವು ಕ್ರಿಯಾಲೋಪವನ್ನು ಎತ್ತಿದೆವು. ಆ ಕ್ರಿಯಾಲೋಪಕ್ಕೆ ತಾವು ಅವಕಾಶ ಕೊಟ್ಟಿರಿ. ಹಾಗೆಯೇ, ಸದನದ ನಿಯಮಾವಳಿಗಳಲ್ಲಿ ಪ್ರತಿಯೊಂದು ಸಂದರ್ಭಗಳಲ್ಲಿ ಯಾವ್ಯಾವ ನಿಯಮಾವಳಿಗಳ ಮೂಲಕ ನಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಬೇಕೆನ್ನುವುದಕ್ಕೆ ಅವಕಾಶವಿರುತ್ತದೆ. ಮಧ್ಯದಲ್ಲಿ ಭಾವೋದ್ವೇಗಕ್ಕೊಳಗಾದಾಗ ಪ್ರತಿಯೊಬ್ಬರು ಮಾತನಾಡತಕ್ಕಂಥದ್ದು ಮಾಡುತ್ತೇವೆ. ಈ ವಿಚಾರದ ಸಂದರ್ಭ ಬಂದಾಗ ಆ ವಿಷಯವನ್ನು ನೇರವಾಗಿ ಆಪಾದನೆ ಮಾಡದಂಥ ರೀತಿಯಲ್ಲಿ ಅವರು ಹೇಳಿದರು. ನಿಮ್ಮ ಮೇಲೆ ಆಪಾದನೆ ಇದೆ, ನಿಮ್ಮ ಮೇಲೆ ಆಪಾದನೆ ಇದೆ ಈ ತರಹದ ರೀತಿಯಲ್ಲಿ ಆಯಿತು. ಆದ್ದರಿಂದ, ನಾವು ಉಭಯ ಕಡೆ ಇರತಕ್ಕಂಥವರೂ ಕೂಡ ಉದ್ವೇಗಕ್ಕೊಳಗಾದೆವು. ಅದನ್ನು ನಾವೀಗ ಒಂದು ಕೆಟ್ಟ ಘಳಿಗೆ ಎಂದು ಹೇಳಿ ಮರೆತು ಬಿಡಬೇಕು. ಮಾನ್ಯ ರಮೇಶ್ ಕುಮಾರ್‌ರವರು ಹಿರಿಯರಾಗಿರುವುರಿಂದ ಮತ್ತು ಸದನದಲ್ಲಿ ಬಹಳ ವರ್ಷಗಳ ಕಾಲ ಕೆಲಸ ಮಾಡಿದಂಥ, ಆ ಪೀಠದಲ್ಲಿ ಕುಳಿತು ಕೆಲಸ ಮಾಡಿದಂಥ ಹಿನ್ನೆಲೆಯಲ್ಲಿ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳತಕ್ಕಂಥದ್ದು ಇಷ್ಟೆ, ಇವರು ನಿಮ್ಮ ಒಬ್ಬ ಚಿಕ್ಕ ತಮ್ಮ ಎಂದು ಭಾವಿಸಬೇಕು. ಒಂದು ವೇಳೆ, ಏನಾದರೂ ನಿಮ್ಮ ಮನಸ್ಸಿಗೆ ನೋವಾಗುವಂಥ ಮಾತು ಬಂತೆಂದು ಭಾವಿಸಿಕೊಂಡಿದ್ದರೆ, ಅದನ್ನು ನಾವು ಮರೆತು ಬಿಡುವುದರಲ್ಲಿ ನಮ್ಮ ದೊಡ್ಡತನವಿದೆ. ಹಾಗೆಯೇ, ನಾನು ಇದರ ಮೂಲಕವಾಗಿ ಎಲ್ಲಾ ಮಾನ್ಯ ಸದಸ್ಯರುಗಳಿಗೆ ವಿನಂತಿ ಮಾಡಿಕೊಳ್ಳತಕ್ಕಂಥಾದ್ದು ಇಷ್ಟೆ. ಒಬ್ಬರ ನಂತರ ಒಬ್ಬರು ಮಾತನಾಡಿದರೆ ಎಲ್ಲರಿಗೂ ಕೂಡ ವಿಷಯ ಗೊತ್ತಾಗುತ್ತದೆ. ಒಂದು ವೇಳೆ ಏನಾದರೂ ದೌರ್ಬಲ್ಯದ ಮಾತುಗಳನ್ನು ನಾವು ಮಾತನಾಡಿದರೆ ನಾವೆಲ್ಲಾ ಕೇವಲ ಮನುಷ್ಯರು. ಏನಾದರೊಂದು ಘಳಿಗೆಯಲ್ಲಿ ತಪ್ಪಾಗಿದೆ ಎಂದು ಹೇಳಿ ಅದನ್ನು ಮರೆತು ಇಲ್ಲಿಗೇ ಬಿಟ್ಟು ನೀವು ಕಾರ್ಯಕಲಾಪಗಳನ್ನು ನಡೆಸಲಿಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ನಾನು ಮಾನ್ಯ ನಮ್ಮ ಈಶ್ವರಪ್ಪನವರು ವಿನಂತಿ ಮಾಡಿಕೊಂಡರಂತೆ, ಇನ್ನೂ ಬಹಳ ಮುಖ್ಯವಾದ, ಗುರುತರವಾದಂಥ ಚರ್ಚೆಗಳನ್ನು ಮಾಡಬೇಕಾದಂಥ ಕಾರಣವಿರುವುದರಿಂದ ದಯವಿಟ್ಟು ಮಾನ್ಯ ಸದಸ್ಯರೆಲ್ಲರೂ ಕೂಡ ತಮ್ಮ ಸ್ಥಾನಕ್ಕೆ ಹೋಗಿ, ಇದನ್ನು ಅರ್ಥಪೂರ್ಣವಾದಂಥ ಚರ್ಚೆಗೆ ಅವಕಾಶ ಕಲ್ಪಿಸಿಕೊಡಬೇಕು ಮತ್ತು ಯಾವುದು ಅನಪೇಕ್ಷಣೀಯವಾಗಿರತಕ್ಕಂಥ ಶಬ್ದಗಳು ಪ್ರಯೋಗವಾಗಿವೆ, ಅವನ್ನೆಲ್ಲಾ ತಾವು ತೆಗೆದುಹಾಕಿದ್ದೀರಿ ಎನ್ನತಕ್ಕಂಥ ಮಾತು ಹೇಳಿರುವುದರಿಂದ ನಾವು ಮತ್ತೆ ಚರ್ಚೆ ಮಾಡುವಂಥದ್ದೇನೂ ಇಲ್ಲ. ಮುಂದಿನ ಕಾರ್ಯಕಲಾಪಗಳಿಗೆ ನಾವು ಹೋಗಲಿಕ್ಕೆ, ಸದನ ಸುಗಮವಾಗಿ ನಡೆಯಲಿಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಹೇಳಿ ನಾನು ನಿಮ್ಮೆಲ್ಲರ ಪರವಾಗಿ ವಿನಂತಿಯನ್ನು ಮಾನ್ಯ ಸದಸ್ಯರಿಗೆ ಮಾಡುತ್ತಿದ್ದೇನೆ.

ಅಧ್ಯಕ್ಷರು: ದಯಮಾಡಿ, ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಪ್ರಕಾಶ್‌ರವರ ಮಾತುಗಳನ್ನು ನಾನು ಗೌರವಿಸುತ್ತೇನೆ. ಸದನದ ಕಲಾಪ ನಡೆಯುವ ವೇಳೆಗೆ given and take ಇರಬೇಕು. ಪೂರ್ವಾಗ್ರಹಪೀಡಿತರಾಗಿ, ಶಾಸ್ತ್ರ ಜಿದ್ದಿನಿಂದ ಯಾರೂ ಸದನಕ್ಕೆ ಬರುವುದಿಲ್ಲ. ಕಲಾಪ ನಡೆಯುವ ವೇಳೆಗೆ ಸಾಧ್ಯವಾದಷ್ಟು ಮಟ್ಟಿಗೆ ನಾವು ತಿಳುವಳಿಕೆಯಿಂದ ಉದ್ದೇಗಕ್ಕೊಳಗಾಗದಂತೆ ಕೆಲಸ ಮಾಡತಕ್ಕಂಥ ಜಾಣ್ಮೆ ನಮ್ಮಲ್ಲಿರಬೇಕು. ಆದರೆ, ನಾವು ಮನುಷ್ಯರು. ತಪ್ಪಾಗಬಹುದು. ತಪ್ಪಾದಂಥ ಸನ್ನಿವೇಶದಲ್ಲಿ ಈ ರೀತಿಯಲ್ಲಿ ಮಧ್ಯಸ್ತಿಕೆಯ ಮಾತುಗಳನ್ನು ಅವರು ಹೇಳಬೇಕು. ನಾವು ಇಲ್ಲ, ಇಲ್ಲವೆಂದು ಗಂಟು ಹಾಕಿಕೊಂಡು ಎಳೆದು ರಂಪ ಮಾಡುವುದಕ್ಕೆ ನಾನು ಸಿದ್ದನಿಲ್ಲ. ಅವರ ಮಾತುಗಳನ್ನು ನಾನು ಗೌರವಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವೇ ನಿಮಿಷಗಳಲ್ಲಿ ಬರುವವರಿದ್ದಾರೆ. ನಮ್ಮ ಸದಸ್ಯರನ್ನು ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಯಾವ ವಿಚಾರವನ್ನು ನಾವು ಬೆಳಿಗ್ಗೆ ಪ್ರಸ್ತಾಪ ಮಾಡುತ್ತಿದ್ದೆವು, ಅವರು ಬಂದು ಪ್ರಸ್ತಾಪ ಮಾಡಬೇಕು. ಒಂದು ವೇಳೆ ಅವರು ಬರದಿದ್ದರೆ, ನಾನೇ ಆ ವಿಚಾರವನ್ನು ನಮ್ಮ ಪಕ್ಷದ ನಿಲುವೇನಿದೆ ಎಂದು ಹೇಳಿ ಮುಂದುವರಿಸುತ್ತೇನೆ. ನಂತರ, ಕಲಾಪ ನಡೆಯಬಹುದು. ದಯಮಾಡಿ, ಎಲ್ಲರೂ ತಮ್ಮ ಸ್ಥಾನಗಳಿಗೆ ಬರಬೇಕು.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಕಾಂಗ್ರೆಸ್ ಪಕ್ಷದ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

ಶ್ರೀ ಕೆ.ಆರ್. ರಮೇಶ್ ಕುಮಾರ್: ಯಾವ ವಿಚಾರವನ್ನು ನಾವು ಬೆಳಿಗ್ಗೆ ಚರ್ಚೆ ಮಾಡುತ್ತಿದ್ದೆವು, ತಾವು ತಮ್ಮ ತೀರ್ಪನ್ನು ಕೂಡ ಕೊಟ್ಟಿದ್ದೀರಿ. ಅತ್ಯಂತ ನಮ್ರತೆಯಿಂದ, ಸದ್ಭಾವನೆಯಿಂದ ನಾನು ತಮ್ಮಲ್ಲಿ ಇಷ್ಟು ವಿನಂತಿ ಮಾಡಿಕೊಳ್ಳುತ್ತೇನೆ, ನಿಮ್ಮ ತೀರ್ಪನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. ತೀರ್ಪನ್ನು ಪ್ರಶ್ನೆ ಮಾಡತಕ್ಕಂಥದ್ದು, ಅಧ್ಯಕ್ಷರ ತೀರ್ಪನ್ನು ಪ್ರಶ್ನೆ ಮಾಡತಕ್ಕಂಥದ್ದು ಸತ್ಸಂಪ್ರದಾಯ ಅಲ್ಲ. ತೀರ್ಪನ್ನು ಪುನರ್ ವಿಮರ್ಶೆ ಮಾಡಿ ಎಂದು ಕೇಳತಕ್ಕಂಥದ್ದು ನಮ್ಮ ಅಂತರ್ಗತವಾದ ಹಕ್ಕು. ನಾವು ನಮ್ಮ ಪಕ್ಷದ ಪರವಾಗಿ ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇವೆ, ಒಬ್ಬ ರಾಜ್ಯದ ಮುಖ್ಯಮಂತ್ರಿ, ನಮ್ಮೆಲ್ಲರ ಹೆಮ್ಮೆಯ ಪ್ರತೀಕ ಆಗಿರುತ್ತಾರೆ. ಅವರನ್ನು ಇಡೀ ಸಭೆಯ ನಾಯಕರೆಂದು ಹೇಳಿ ನಾವು ಗೌರವಿಸುತ್ತೇವೆ. ಅಂಥವರ ಮೇಲೆ ಒಂದು ಗುರುತರವಾದಂಥ ಆಪಾದನೆಯನ್ನು ಸದನದ ಹೊರಗೆ ಒಬ್ಬರು ಮಾಡಿದ್ದಾರೆ. ಅವರೇನು ಇವತ್ತು ಸಮ್ಮಿಶ್ರ ಸರ್ಕಾರವನ್ನು ನಡೆಸುತ್ತಿದ್ದಾರೆ ಸಮ್ಮಿಶ್ರ ಸರ್ಕಾರದಲ್ಲಿ ಜವಾಬ್ದಾರಿಯ ಪಾಲನ್ನು ವಹಿಸಿಕೊಂಡಿರತಕ್ಕಂಥ ಒಂದು ಪಕ್ಷದ ಒಬ್ಬ ಜವಾಬ್ದಾರಿ ವ್ಯಕ್ತಿ ಅವರಾಗಿದ್ದಾರೆ. ಒಂದು ಜಿಲ್ಲಾ ಘಟಕದ ಅಧ್ಯಕ್ಷರಾಗಿ ಅವರಾಗಿದ್ದಾರೆ. ಹೇಳಿಕೆ ಮಾಡಿದಂಥವರು, ನಾನು ಹಾಗಲ್ಲ ಹೇಳಿದ್ದು ಅಂತಲೂ

ಹೇಳಿಲ್ಲ. ನಾನು ಆ ರೀತಿ ಏನೂ ಹೇಳಿಲ್ಲ ಅಂತಲೂ ಹೇಳಿಲ್ಲ. ನನ್ನ ಹೇಳಿಕೆಯನ್ನು ಹಿಂದಕ್ಕೆ ಪಡೆದುಕೊಂಡಿದ್ದೇನೆ ಅಂತಲೂ ಹೇಳಿಲ್ಲ. ನಾವು ಒಟ್ಟಾಗಿ ಒಂದು ಸರ್ಕಾರ ನಡೆಸುವಾಗ ನೀನು ನಮ್ಮ ಪಕ್ಷದ ಒಬ್ಬ ಜವಾಬ್ದಾರಿ ವ್ಯಕ್ತಿಯಾಗಿದ್ದು ನಮ್ಮ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿ ಮೇಲೆ ಹೀಗೆ ಮಾತನಾಡಿದ್ದೀಯಲ್ಲಪ್ಪ, ಇದು ನಿನಗೆ ತರ ಅಲ್ಲವೆಂದು ಹೇಳಿ ಅವರ ಪಕ್ಷದಿಂದಲೂ ಅವರ ಮೇಲೆ ಯಾವ ಕಾರ್ಯಕ್ರಮ ಜರುಗಿಸಿಲ್ಲ. ಶಿಸ್ತೋ, ಇನ್ನೊಂದೋ ಮತ್ತೊಂದೋ ಜರುಗಿಸಿಲ್ಲ. ಒಂದು ಸರ್ಕಾರವಾಗಿ ಒಬ್ಬ ಮುಖ್ಯಮಂತ್ರಿ ಮೇಲೆ ಬೇಜವಾಬ್ದಾರಿಯಿಂದ ಯಾರೋ ಒಬ್ಬರು ಈ ರೀತಿಯ ಮಾತುಗಳನ್ನು ಹೇಳಿ ಅದಕ್ಕೇ ವ್ಯಾಪಕವಾದಂಥ ಪ್ರಚಾರ ಸಿಕ್ಕಿಬಿಟ್ಟು ಸರ್ಕಾರ ಕೂಡ ನಿರ್ಲಿಪ್ತತೆಯಿಂದ ಇದ್ದರೆ, ಅದೊಂದು ಸರ್ಕಾರಕ್ಕೆ ಗೌರವ ತರತಕ್ಕಂಥ ವಿಚಾರವೂ ಅಲ್ಲ. ಅದಕ್ಕೆ ಬೆಳಿಗ್ಗೆ ನಾನು ತಮಗೆ ಹೇಳುವ ಪ್ರಯತ್ನವನ್ನು ಮಾಡಿದೆ. ಇದು optional ಅಲ್ಲ. ಇದು mandatory. Compulsory ಯಾಗುತ್ತದೆ. ಒಂದು ರಾಜ್ಯದ ಮುಖ್ಯಮಂತ್ರಿ ಹುದ್ದೆಯನ್ನು ಅವರು ಅಪಕೀರ್ತಿಗೆ ಒಳಪಡಿಸಿದಾಗ ಅಂಥ ವ್ಯಕ್ತಿಯ ಮೇಲೆ ರಾಜ್ಯದ ಪರವಾಗಿರತಕ್ಕಂಥ prosecutor ಯಾರಿರುತ್ತಾರೆ, ಅವರು ಈ ಎಲ್ಲಾ ಘಟನೆಗಳ ವ್ಯಾಪ್ತಿ ಯಾವ Sessions Court ನಲ್ಲಿ ಬರುತ್ತದೆ, ಆ Sessions Court ನಲ್ಲಿ ಇಂಥವರು ಇಂಥ complaint ಕೊಟ್ಟಿದ್ದಾರೆಂದು complaint ದಾಖಲು ಮಾಡಬೇಕು. Police ನವರು ಆ complaint ಅನ್ನು ವಿಚಾರಣೆ ಮಾಡಬೇಕು. ಆ ಪ್ರಕ್ರಿಯೆ ಅಲ್ಲಿಗೇ ನಿಲ್ಲುವುದಿಲ್ಲ. ಅವರು ವಿಚಾರಣೆ ಮಾಡಿ, ಅವರು ಮಾಡಿರತಕ್ಕಂಥ ಆಪಾದನೆಯಲ್ಲಿ ಏನೂ ತಿರುಳಿಲ್ಲವೆಂದು ಹೇಳಿದರೆ ಆವಾಗ ಆತ false complaint ಕೊಟ್ಟ ಎಂದು ಹೇಳಿ ಮತ್ತೆ ನೀವು prosecute ಮಾಡಬೇಕಾಗುತ್ತದೆ. ಒಂದು ವೇಳೆ ಆತ ಕೊಟ್ಟಂಥ complaint ನಲ್ಲೇನಾದರೂ, ಸಾರಾಂಶವಿದ್ದರೆ ಅದರ ಪರಿಣಾಮ ಬೇರೆಯೇ ಆಗುತ್ತದೆ. ನಾವು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿರುವುದು ಅಧ್ಯಕ್ಷರೆ, ಸಮ್ಮಿಶ್ರ ಸರ್ಕಾರದಲ್ಲಿ ಪಾಲುದಾರರಾಗಿರತಕ್ಕಂಥ ಒಂದು ಪಕ್ಷದ ಒಬ್ಬ ಜವಾಬ್ದಾರಿ ವ್ಯಕ್ತಿ ಮಾಡಿರತಕ್ಕಂಥ ಹೇಳಿಕೆಯ ಬಗ್ಗೆ ಅವರ ಪಕ್ಷದವರೂ ನಿರ್ಲಿಪ್ತತೆಯಿಂದ ಇದ್ದಾರೆ. ಮುಖ್ಯಮಂತ್ರಿಗಳೂ ನಿರ್ಲಿಪ್ತತೆಯಿಂದ ಇದ್ದಾರೆ. ಸರ್ಕಾರವೂ ನಿರ್ಲಿಪ್ತತೆಯಿಂದಿದೆ. Demands ನಮ್ಮ ಮುಂದಿದೆ. ಎಲ್ಲಾ ವಿಚಾರ ಚರ್ಚೆ ಮಾಡುತ್ತಿದ್ದೇವೆ. ನಿಜ. ಆದರೆ, 150 ಕೋಟಿ ರೂಪಾಯಿಗಳ ದೊಡ್ಡ ಪ್ರಮಾಣದ ಹಣದ ವಿಚಾರ ಕೂಡ ಹೇಳುವುದಕ್ಕೆ ಹೋಗುವುದಿಲ್ಲ. ಅದನ್ನು ದೊಡ್ಡ ಪ್ರಮಾಣದಲ್ಲಿ ವೈಭವೀಕರಿಸಿ, ಈ ತರಹದ ಒಂದು ಆಪಾದನೆಯನ್ನು ಮಾಡಿದಾಗ ಅದನ್ನು ನಾವು demandsನಲ್ಲಿ ಚರ್ಚೆ ಮಾಡಿ ಎಂದು ತಾವು ಹೇಳತಕ್ಕಂಥದ್ದು ಸರಿಯೇ?

ಅಧ್ಯಕ್ಷರು: ಅದು ಒಂದೇ ದಾರಿ ಇರುವುದು ನಿಮಗೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನ್ಯಾಯವೇ? ನಾನು ತಮ್ಮ ತೀರ್ಪನ್ನು ಪ್ರಶ್ನೆ ಮಾಡುತ್ತಿಲ್ಲ. ನಾನು ನಿಮಗೇನು ಕೇಳುತ್ತಿದ್ದೇನೆಂದರೆ, ಯಾವ ವಿಷಯಕ್ಕೆ ಯಾವ ರೀತಿಯ ನಿರ್ಣಯವನ್ನು ತಾವು ತೆಗೆದುಕೊಳ್ಳಬೇಕು? ಇದು ರಾಜ್ಯದ ಹಿತದೃಷ್ಟಿಯಿಂದ ನಮ್ಮ ಕಲಾಪಗಳ ಒಂದು ಸತ್ಸಂಪ್ರದಾಯವೇನಿದೆ, ಈ ಹಿರಿಮೆ, ಈ ಹಿನ್ನೆಲೆ, ಇದರ ಗಾಂಭೀರ್ಯತೆ, ಇದರ ಪಾವಿತ್ರ್ಯತೆಯನ್ನು ಕಾಪಾಡತಕ್ಕಂಥ ದೃಷ್ಟಿಯಿಂದ ತಾವು ಆ ರೀತಿಯಾದಂಥ ಒಂದು ತೀರ್ಪನ್ನು ಕೊಟ್ಟು, ತೆಗೆದುಕೊಳ್ಳಿ demands ಮೇಲೆ ಮಾತನಾಡಿ ಎಂದು ಹೇಳಿ ಹೇಳಿದರೆ, ನ್ಯಾಯ ಆಗುತ್ತದೆಯೇ? ನಿಮಗೆ ಸಮಾಧಾನವೇ? ನೀವು ಒಂದು ವೇಳೆ ನನ್ನ ತೀರ್ಪಿಗೆ ನಾನು ಅಂಟಿಕೊಳ್ಳುತ್ತೇನೆಂದರೆ, ನಿಮ್ಮ ತೀರ್ಪಿನ ವಿರುದ್ಧ ನಾವೇನೂ protest ಮಾಡುವುದಕ್ಕಾಗುವುದಿಲ್ಲ. ಆದರೆ, ಇಂಥ ವಿಚಾರದಲ್ಲಿ ವಿಚಾರಣೆಯಾಗಬೇಕೆಂದು ಹೇಳಿ ನಮ್ಮದೇ ಆದಂಥ ನಿಲುವನ್ನು ನಾವು ಅನಿವಾರ್ಯವಾಗಿ ವ್ಯಕ್ತಪಡಿಸಬೇಕಾಗುತ್ತದೆ. ಆದುದರಿಂದ, ನಾನು ಕೈ ಜೋಡಿಸಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಆ ಸ್ಥಾನದಲ್ಲಿ ಕುಳಿತುಕೊಳ್ಳತಕ್ಕಂಥದ್ದಕ್ಕೆ ಬಹಳ ಪುಣ್ಯ ಬೇಕು. ಎಲ್ಲಾ ವಿಷಯ ಚರಿತ್ರೆಯಲ್ಲಿ ದಾಖಲಾಗುತ್ತದೆ. ಇಂಥ ವಿಚಾರದಲ್ಲಿ ಅಧ್ಯಕ್ಷರು ಎಲ್ಲೋ ಒಂದು ಕಡೆಗೆ ಆತುರವಾಗಿ ತೀರ್ಪನ್ನು ಕೊಟ್ಟರು ಎನ್ನುವುದರ ಬದಲು ವಿರೋಧ ಪಕ್ಷದವರು ಬೇಡಿಕೆ ಕೊಟ್ಟು ಮನವಿ ಸಲ್ಲಿಸಿದ ಮೇಲೆ ಅವರು ದೊಡ್ಡ ಮನಸ್ಸು ಮಾಡಿ ತಾವು ಕೊಟ್ಟಂಥ ತೀರ್ಪನ್ನು ಪುನರ್ ವಿಮರ್ಶೆ ಮಾಡಿದರು ಎನ್ನುವಂಥ ಕೀರ್ತಿಗೆ ತಾವು ಪಾತ್ರರಾಗಬೇಕು, ಈ ವಿಚಾರವನ್ನು ನಿಲುವಳಿ ಸೂಚನೆಯ ಕೆಳಗೆ ತೆಗೆದುಕೊಳ್ಳುವುದಕ್ಕೆ ತಾವು ಮತ್ತೊಮ್ಮೆ ಆಲೋಚನೆ ಮಾಡಬೇಕೆಂದು ಹೇಳಿ ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು): ಮಾನ್ಯ ರಮೇಶ್ ಕುಮಾರ್‌ರವರು ಬಹಳ, ನಿರ್ಭಾವದಿಂದ ಈ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮತ್ತೆ ಪುನರ್ ವಿಮರ್ಶೆ ಮಾಡಿದಂಥ ವಿಷಯದ ಬಗ್ಗೆ ಅವರು ಕೇಳಿಕೊಳ್ಳುವುದಕ್ಕೆ ಅವರಿಗೆ ಅಧಿಕಾರ ಕೂಡ ಇದೆ. ಆದರೆ ಹಾಗೆ ಹೇಳುವಾಗ ಸರ್ಕಾರದ ಮೇಲೆ ಇಂಥ ಗುರುತರವಾದ ಆಪಾದನೆಗಳು ಬಂದಾಗ ಸಮ್ಮಿಶ್ರ ಸರ್ಕಾರದ ನೀವುಗಳಾದರೂ ಕೂಡ ಕ್ರಮ ಏಕೆ ಕೈಗೊಳ್ಳಲಿಲ್ಲ? ಇಂಥ ವಿಚಾರಗಳನ್ನು ನೀವು ಕೊಳ್ಳಬಹುದಾಗಿತ್ತಲ್ಲವೆಂದು ಅವರು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ನಾನು ನಮ್ಮ ಎಲ್ಲಾ ಹಿರಿಯ ಶಾಸಕರುಗಳಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ ಇದರಲ್ಲಿ ರಾಜಕೀಯ ತರುತ್ತಿದ್ದೇನೆಂದು ಯಾರೂ ಅನ್ನಬಾರದು. ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ನಮ್ಮ ರಾಜ್ಯದಿಂದ ಆಯ್ಕೆಯಾಗಿ ಹೋಗಿದ್ದಂಥ ಮಾನ್ಯ ಹೆಚ್.ಎನ್. ನಂಜೇಗೌಡರವರು, ಭೋಫರ್ಸ್ ವಿಷಯದಲ್ಲಿ ಇಂಥ ಗುರುತರವಾದಂಥ ಆಪಾದನೆಗಳು ಬಂದಿರುವುದರಿಂದ

ನೀವು ರಾಜೀನಾಮೆ ಕೊಡಬೇಕಾಗುತ್ತದೆ ಇದನ್ನು ಕೊಡುವುದಕ್ಕಿಂತ ಪೂರ್ವದಲ್ಲಿ ಕಾಂಗ್ರೆಸ್ ಪಕ್ಷ ಅವರ ಮೇಲೆ ಯಾವುದೇ ಕ್ರಮವನ್ನು ಕೈಗೊಳ್ಳಲಿಲ್ಲ. ಲೋಕಸಭಾ ಸದಸ್ಯರಾಗಿ ನೀವು ಏಕೆ ಇಂಥ ವಿಚಾರಗಳನ್ನು ಎತ್ತಿದ್ದೀರಿ ಎಂದು ಪ್ರಶ್ನೆ ಮಾಡಲಿಲ್ಲ. ಎಲ್ಲಾ ಪ್ರಶ್ನೆಗಳಿಗೂ ಕೂಡ ವಿವಿಧ ಮುಖಗಳು ಇರುತ್ತವೆ. ಎಲ್ಲಾ ಪ್ರಶ್ನೆಗಳಿಗೂ ಕೂಡ ವಿವಿಧವಾಗಿರತಕ್ಕಂಥ ಆಯಾಮಗಳು ಇರುತ್ತವೆ. ನೀವು 190 ನ್ನು ಹೇಳಿದಿರಿ, ನಿಮಗೆ ಧನ್ಯವಾದಗಳನ್ನು ಹೇಳುತ್ತೇವೆ, 196 ಕ್ರಿಮಿನಲ್ ಪ್ರೋಸಿಜೆರ್ ಕೋಡ್‌ನ ಪ್ರಕಾರ ಇದಕ್ಕೆ ಆರು ತಿಂಗಳು ಸಮಯವಿದೆ. There is law of limitations. ಯಾವುದಾದರೊಂದು ನಿರ್ಣಯವನ್ನು ಆತುರ ಆತುರವಾಗಿ ಕೈಗೊಳ್ಳಬಾರದು ಎಂದು ತಾವೇನು ಪುನರ್ ವಿಮರ್ಶೆ ಮಾಡಲಿಕ್ಕೆ ಅವರಿಗೆ ಹೇಗೆ ಅರಿಕೆ ಮಾಡಿಕೊಂಡಿರಿ, ಆ ಹೇಳಿಕೆಗಳು ಪ್ರತಿಯೊಂದು ಪತ್ರಿಕೆಯಲ್ಲೂ ಕೂಡ ಒಂದೊಂದು ವಾಕ್ಯದಲ್ಲಿ ವ್ಯತ್ಯಾಸ ಇರುವಂಥದ್ದನ್ನು ಕಂಡಿದ್ದೇವೆ. ಮತ್ತೆ ಬೇರೆ ಬೇರೆ ಸಂದರ್ಭದಲ್ಲಿ ಕೊಟ್ಟಿರತಕ್ಕಂಥ, ಟೆಲಿವಿಷನ್‌ನಲ್ಲಿ ಮಾತನಾಡಿದಂಥ ವಿಷಯದಲ್ಲಿ ಕೂಡ ವ್ಯಾಕರಣಬದ್ಧವಾಗಿ ಇಲ್ಲದೇ ಇರತಕ್ಕಂಥ ಒಂದು ವಾಕ್ಯಗಳು ಇವೆ. ಇವುಗಳೆಲ್ಲವನ್ನೂ ನಾಳೆ ನ್ಯಾಯಾಲಯದಲ್ಲಿ ತೆಗೆದುಕೊಂಡು ಹೋಗುವಾಗ ನಾವು ಆತುರವಾಗಿ ಕ್ರಮ ಕೈಗೊಂಡೆವು ಎನ್ನುವಂಥ ಆಪಾದನೆಗೆ ನಾವು ಒಳಗಾಗಬಾರದು. ನಾವು ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳು ಸಮಾಲೋಚನೆಯಲ್ಲಿ ತೊಡಗಿದ್ದಾರೆ. ನಮ್ಮದೇ ಆಗಿರತಕ್ಕಂಥ ಮನೆಯನ್ನು ಹೇಗೆ ಸರಿಪಡಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ಮತ್ತು ನಮ್ಮ ಗೌರವವನ್ನು ಹೇಗೆ ಉಳಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ನಿಮ್ಮಷ್ಟೇ ನಾವು ಕಾತುರರಾಗಿದ್ದೇವೆ. ನಿಮಗೆ ಇಷ್ಟನ್ನು ಮಾತ್ರ ನಮ್ಮ ಸರ್ಕಾರದಿಂದ ಹೇಳುತ್ತೇವೆ. ನಿಮ್ಮನ್ನಾಗಲಿ, ನಮ್ಮನ್ನಾಗಲಿ, ಜನತೆಯನ್ನಾಗಲಿ, ಮಾನ್ಯ ಕುಮಾರಸ್ವಾಮಿಯವರಾಗಲಿ, ಮಾನ್ಯ ಯಡಿಯೂರಪ್ಪನವರಾಗಲಿ ಅಪಮಾನಿತರಾಗುವಂಥ ರೀತಿ ಆಪಾದನೆಗಳಿಗೆ ಸರಿಯಾದ ರೀತಿಯಲ್ಲಿ ಅವರು ಉತ್ತರ ಕೊಡುತ್ತಾರೆ. ತಾವು ನಮ್ಮ ಬಗ್ಗೆ ತೋರಿಸಿದ ಕಳಕಳಿಗೆ ಧನ್ಯವಾದಗಳು, ಈಗಾಗಲೇ ಈ ವಿಷಯವನ್ನು ತೀರ್ಮಾನ ಮಾಡಿರುವುದರಿಂದ, ಪುನರ್ ವಿಮರ್ಶೆ ಮಾಡಬೇಕೆಂದು ಅವರು ಕೇಳಿದ್ದು ತಮ್ಮ ವಿವೇಚನೆಗೆ ಬಿಟ್ಟ ವಿಷಯ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ): ಮಾನ್ಯ ಅಧ್ಯಕ್ಷರೆ, ಆಪಾದನೆ ನಾವು ಕಾಂಗ್ರೆಸ್ ಪಕ್ಷದಿಂದ ಮಾಡಿಲ್ಲ, ಆಡಳಿತ ಪಕ್ಷದ ಸಮ್ಮಿಶ್ರ ಸರಕಾರದ ಒಬ್ಬ ಜವಾಬ್ದಾರ ಸದಸ್ಯರು ಮೇಲ್ಮನೆಯ ಸದಸ್ಯರು, ಬಿಜೆಪಿ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರು, ಮಾಡಿದ್ದಾರೆ. ಇದು ನಿಲುವಳಿ ಸೂಚನೆಯ ಮುಖಾಂತರ ಚರ್ಚೆ ಮಾಡಬೇಕಾಗುತ್ತದೆ. ನಿಲುವಳಿ ಸೂಚನೆ ಎಂದರೆ ಏನು? ಮಹತ್ವದ ವಿಷಯ ಇರಬೇಕು, ಇತ್ತೀಚೆಗೆ ಆಗಿರುವಂಥದ್ದು ಇರಬೇಕು, ಇವತ್ತು ಅವರು ಮಾಡಿರುವ

ಆಪಾದನೆ ಸರಿ ಇದೆಯೋ, ತಪ್ಪಾಗಿದೆಯೋ, ಸುಳ್ಳು ಇದೆಯೋ ಅದು ಬೇರೆ ವಿಚಾರ ನಂತರ ಅದನ್ನು ವಿಚಾರ ಮಾಡೋಣ. ಆದರೆ ಇವತ್ತು ಮುಖ್ಯವಾಗಿ ರಾಜ್ಯದಲ್ಲಿ ಬೀದಿ ಬೀದಿಯಲ್ಲಿ ಈ ವಿಚಾರ ಚರ್ಚೆಯಾಗುತ್ತಿದೆ. ದೇಶದಲ್ಲಿ ಕೂಡ ಚರ್ಚೆ ನಡೆಯುತ್ತಿದೆ. ಒಬ್ಬ ರೂಲಿಂಗ್ ಪಾರ್ಟಿಯ ಲೆಜಿಸ್ಲೇಟರ್ ಮುಖ್ಯಮಂತ್ರಿಗಳ ಮೇಲೆ ಆಪಾದನೆ ಮಾಡಿದ್ದಾರೆ ಎಂದು ಚರ್ಚೆಯಾಗುತ್ತಿದೆ. ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಹಾಗೆ, ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯ ನಾಯಕರು. ಹೀಗಾಗಿ ಇದು ಕೇವಲ ಜೆಡಿ (ಎಸ್), ಬಿಜೆಪಿ ವ್ಯವಹಾರವಲ್ಲ. ಇದು ನಿಮ್ಮ ನಿಮ್ಮ ಮೀಟಿಂಗ್‌ಗಳು ಆದಾಗ ನಿಮ್ಮ ನಿಮ್ಮ ಸಮಸ್ಯೆ ಬಗೆ ಹರಿಸಿಕೊಂಡರೆ ಸಂತೋಷ. ಆದರೆ, ಶಾಸನ ಸಭೆಯಲ್ಲಿ ಚರ್ಚೆ ಮಾಡುವಾಗ ಅಥವಾ ಹೊರಗಡೆ ಚರ್ಚೆ ಮಾಡುವಾಗ ಇದು ಕೇವಲ ಮನೆಯ ವಿಷಯ ಆಗುವುದಿಲ್ಲ. ನನ್ನ ದೃಷ್ಟಿಯಲ್ಲಿ ಇಂಥ ಒಂದು ಗಂಭೀರವಾದ ಆಪಾದನೆ ನಮ್ಮ ರಾಜ್ಯದ ಇತಿಹಾಸದಲ್ಲಿ ರೂಲಿಂಗ್ ಪಾರ್ಟಿಯ ಸದಸ್ಯರು ಯಾವತ್ತಿಗೂ ಕೂಡ ಯಾವ ಒಂದು ಮುಖ್ಯಮಂತ್ರಿಗಳ ಮೇಲೆ ಮಾಡಿರಲಿಲ್ಲ. ವಿರೋಧ ಪಕ್ಷದವರು ನಾವು ಮಾಡಿರಬಹುದು. ನಾವು ಇದ್ದಾಗ ನಮ್ಮ ಮೇಲೆ ವಿರೋಧ ಪಕ್ಷದವರು ಮಾಡಿರಬಹುದು. ಅಥವಾ ನಾವು ವಿರೋಧ ಪಕ್ಷದಲ್ಲಿ ಇದ್ದಾಗ ಮಾಡಿರಬಹುದು. ಆದರೆ, ಒಬ್ಬ ಆಡಳಿತ ಪಕ್ಷದ ಸದಸ್ಯ ತಮ್ಮ ನಾಯಕರ ಮೇಲೆ ಆಪಾದನೆ ಮಾಡಿ ನಾನು ಆಪಾದನೆಯನ್ನು ಸಾಬೀತು ಮಾಡುತ್ತೇನೆ, ಅವರು ರಾಜೀನಾಮೆ ಕೊಡಬೇಕು ಎನ್‌ಕ್ವರಿಯೂ ಆಗಬೇಕು, ಇದನ್ನು ಏನು ವಿರೋಧ ಪಕ್ಷದವರು ಡಿಮ್ಯಾಂಡ್ ಮಾಡಬೇಕೋ ಆ ಎಲ್ಲಾ ಡಿಮ್ಯಾಂಡ್‌ನ್ನು ಅವರು ಇಟ್ಟಿದ್ದಾರೆ. ಇವತ್ತು ಈ ಪತ್ರಿಕಾ ಹೇಳಿಕೆ ಮುಖಾಂತರ ಈ ವಿಚಾರ ಅವರು ಹೇಳಿದಾಗ ಯಾರು ಇದ್ದರು? ನಿಮ್ಮ ಸಚಿವ ಸಂಪುಟದ ಒಬ್ಬ ಸಚಿವರು ಇದ್ದರು, ಅಲ್ಲಿ ಆಡಳಿತ ಪಕ್ಷದ ನಿಮ್ಮ ಪಕ್ಷದ ಒಬ್ಬ ಲೋಕಸಭಾ ಸದಸ್ಯರು ಇದ್ದರು. ಇದು ಸರಿನಾ? ಮಾನ್ಯ ಮುಖ್ಯಮಂತ್ರಿಗಳು ಇದು ಸರಿಯಿಲ್ಲ, ಸುಳ್ಳು ಇದೆ ಎಂದು ಹೇಳಿರುವುದನ್ನು ನಾನು ಪತ್ರಿಕೆಗಳಲ್ಲಿ ನೋಡಿದೆ. ಡೆಫರ್‌ಮೇಷನ್ ಕೇಸ್ ಹಾಕುತ್ತೇವೆಂದು ತಾವು ಹೇಳಿದಿರಿ. ಅದಕ್ಕೆ ಜನಾರ್ಧನರೆಡ್ಡಿಯವರು ಹಾಕಲಿ ನಾನು ಫೇಸ್ ಮಾಡುತ್ತೇನೆಂದು ಹೇಳಿದ್ದಾರೆ. ಈ ಮಟ್ಟಕ್ಕೆ ಹೋದರೂ ಸಹ ತಾವು ಏನೂ ಕ್ರಮ ಕೈಗೊಳ್ಳುವುದಿಲ್ಲ. ನಿಮ್ಮ ಪಾರ್ಟನರ್ಸ್ ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ. ಇಲ್ಲಿ ವಿರೋಧ ಪಕ್ಷದವರು ಇಂಥ ಮಹತ್ವದ ವಿಷಯವನ್ನು ಎತ್ತಿದಾಗ ಮಾನ್ಯ ಅಧ್ಯಕ್ಷರಾದ ತಾವು, ಇದನ್ನು ಡಿಮ್ಯಾಂಡ್ ಮೇಲೆ ಡಿಸ್‌ಕಸ್ ಮಾಡಿ ಎಂದು ಹೇಳಿದಿರಿ ಇದು ಸರಿಯಾಗಬಹುದೇನೋ ಎಂದು ತಾವು ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದರು. ಅವರೇನು

ಪಾಪ ಪ್ಯಾಚ್ ಅಪ್ ಆಗಲಿ ಎಂದು ಹೇಳಿದರು. ಇಲ್ಲ ಜನಾರ್ಧನ ರೆಡ್ಡಿಯವರು ಮಾನ್ಯ ಮುಖ್ಯಮಂತ್ರಿಗಳ ಮೇಲೆ ಆಪಾದನೆ ಮಾಡಲಿಲ್ಲ, ಅವರು ಹೇಳಿದ್ದು ಬಳ್ಳಾರಿಯಲ್ಲಿ ಕೆಲವು ಜನ ಮುಖ್ಯಮಂತ್ರಿಗಳ ಹೆಸರು ದುರುಪಯೋಗ ಮಾಡಿಕೊಂಡು ಮಾಡುತ್ತಿದ್ದಾರೆಂದು ಅವರು ಹೇಳಿದರು. ಅದನ್ನು ಕೂಡ ಜನಾರ್ಧನ ರೆಡ್ಡಿಯವರು ಡಿನೈ ಮಾಡಿದ್ದಾರೆ. ನೋ ನಾನೇ ಹೇಳಿದ್ದೇನೆ, ನಾನೇ ಚಾರ್ಜ್ ಮಾಡಿದ್ದೇನೆಂದು ಹೇಳಿದ್ದಾರೆ. ಈ ಮಟ್ಟಕ್ಕೆ ಇದು ಹೋದಾಗ, ಇದರಲ್ಲಿ ಏನು ಕಾಣಿಸುತ್ತದೆ? ಒಂದನೆಯದಾಗಿ ನಿಮ್ಮ ನಿಮ್ಮಲ್ಲಿ ಪರಸ್ಪರ ಹೊಂದಾಣಿಕೆಯಿಲ್ಲ. ನೈಸ್ ವಿಚಾರ ಬಂದಾಗ ನಿಮ್ಮ ಮಂತ್ರಿಗಳ ಮೇಲೆ ಆಪಾದನೆಯಾಯಿತು, ನೀವು ನೈಸ್ ಜೊತೆಗೆ ಸೇರಿದಿರಿ ಎಂದು ಹೀಗಾಗಿ ಈ ಆಪಾದನೆ ಎಂದಾಯಿತು. ಈಗ ಮುಖ್ಯಮಂತ್ರಿಗಳ ಮೇಲೆ ನಿಮ್ಮ ಜನರೇ ಆಪಾದನೆ ಮಾಡುತ್ತಿದ್ದಾರೆ. Tit for tat ನಡೆಯುತ್ತದೆಯೋ, ನೀವು ಮಾಡಿದಿರಿ ನಾವು ಮಾಡುತ್ತೇವೆಂದು ನಡೆಯುತ್ತಿದಿಯೋ? ನಿಮ್ಮಲ್ಲಿ ಏನಾದರೂ ಕಾಂಪಿಟೇಷನ್ ನಡೆಯುತ್ತಿದೆಯೋ ನಮಗೆ ಗೊತ್ತಿಲ್ಲ. ಇದು ಎಲ್ಲಾ ನಾಡಿನ ಜನರಿಗೆ ಗೊತ್ತಾಗಬೇಕಾಗುತ್ತದೆ. ನಾವು ಇಲ್ಲಿ ಕುಳಿತುಕೊಂಡು ಮಾನ್ಯ ಮುಖ್ಯಮಂತ್ರಿಗಳು ಹೀಗೆ ಮಾಡಿದ್ದಾರೆ ಹಾಗೆ ಮಾಡಿದ್ದಾರೆಂದು ನಾವೇನೂ ಹೇಳಿಲ್ಲ. ಹೀಗಾಗಿ ನಿಮ್ಮ ಪಕ್ಷದ ಅಧ್ಯಕ್ಷರು ಸದಾನಂದಗೌಡರವರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಎಸ್‌ಪಿಗಳ ಟ್ರಾನ್ಸ್‌ಫರ್ ಮಾಡುವಾಗ ಜಿಲ್ಲಾ ಮಂತ್ರಿಗಳ ಕನ್‌ಸಲ್ಟ್ ಮಾಡಿ ಮಾಡಬೇಕೆಂದು ಅವರು ಹೇಳಿದ್ದಾರೆ. ಅಧ್ಯಕ್ಷರು ಸಮರ್ಥನೆ ಮಾಡುತ್ತಾರೆ, ನಿಮ್ಮ ಮುಖಂಡರು ಅಲ್ಲಿ ಸಮರ್ಥನೆ ಮಾಡುತ್ತಾರೆ, ಇಲ್ಲಿ ಬಂದು ನೀವು ಮುಖ್ಯಮಂತ್ರಿಗಳನ್ನು ಡಿಫೆಂಡ್ ಮಾಡಲಿಕ್ಕೆ ಹೋದರೆ ನಾಡಿನ ಜನ ನಿಮ್ಮನು ನಂಬುತ್ತಾರೆಯೇ? ಒಂದು ಧ್ವನಿಯಿಂದ ಒಂದು ನಾಲಿಗೆಯಿಂದ ಮಾತನಾಡಿದರೆ ನಾವು ಎಲ್ಲಾ ನಂಬಬಹುದು. ಇವತ್ತು ನಿಮ್ಮಲ್ಲಿ ವಿಭಿನ್ನವಾದ ವಿಚಾರಗಳಿವೆ. ವಿಭಿನ್ನವಾದ ಮತಗಳು ಇವೆ, ಇಂಥ ಪರಿಸ್ಥಿತಿಯಲ್ಲಿ ಇದನ್ನು ಹಗುರವಾಗಿ ಡಿಮ್ಯಾಂಡ್ ಮೇಲೆ ಚರ್ಚೆ ಮಾಡಿ ಎಂದು ಹೇಳಿ ಹೋಗುವ ವಿಷಯವಲ್ಲ. ಇದು ಗಂಭೀರವಾದ ವಿಷಯ ಆಗಿರುವುದರಿಂದ ಇದರ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಕೇವಲ ಮುಖ್ಯಮಂತ್ರಿಗಳ ದೃಷ್ಟಿಯಿಂದಲ್ಲ, individually Kumaraswamy is differnet. ಈಗ ತಾವು ಮುಖ್ಯಮಂತ್ರಿಗಳಾಗಿದ್ದೀರಿ. ಇಂಥ allegation ಆದಾಗ you have to come clean in the interest of not only you, but in the interest of the State. ರಾಜ್ಯದ ಘನತೆ ಗೌರವದ ಹಿತದೃಷ್ಟಿಯಿಂದ you have to come clean. ಪರ್ಸನಲಿ ನೀವು ಕುಮಾರಸ್ವಾಮಿ ಎಂಎಲ್‌ಎ ಆಗಿದ್ದೀರಿ ಓಕೆ, ಮಾಡಿದರು, ಫೇಸ್ ಮಾಡಿದರು, ನಡುವೆ... ಅದರಲ್ಲಿ ವಿರೋಧ ಪಕ್ಷದವರು ಮಾಡಿದರು, ದೇಶಪಾಂಡೆಯವರು ಮಾಡಿದರು ಎಂದರೆ ನೀವು

ಅವರು ವಿರೋಧ ಪಕ್ಷದವರು ಎಂದು ಹೇಳಬಹುದು. ನಿಮ್ಮ ರೂಲಿಂಗ್ ಪಾರ್ಟಿಯ ಒಬ್ಬ ಮೆಂಬರ್ ಮಾಡಿದರೆ ತಾವೇ ಹೇಳಿ. ತಾವೇ ದೇಶಪಾಂಡೆಯವರೇ ಇದು ಸರಿ ಇದೆ ಎಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ. ಇಲ್ಲಿಗೆ ಫುಲ್‌ಸ್ಟಾಪ್ ಹಾಕುತ್ತೇನೆ. ಹೀಗಾಗಿ ಈ ರೀತಿಯಾಗಿ ಅವರು ಮಾಡಿರತಕ್ಕಂಥ ಸ್ಟೇಟ್‌ಮೆಂಟ್, ಅವರು ಬಹಳ ಕಾನ್ಫಿಡೆಂಟ್ ಆಗಿ I am willing to prove ಎಂದು ಅವರು ಹೇಳುತ್ತಾರೆ. ಇವತ್ತು ಹೇಳುತ್ತಾರೆ, ನೆನ್ನೆ ಹೇಳಿದ್ದಾರೆ, ಹಾಗಾದರೆ ಅವರಿಗೆ ಅವಕಾಶ ಮಾಡಿಕೊಡಬೇಕು ಅಲ್ಲವೆ? ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಹಾಗೆ, ಐಪಿಎಸ್, ಸಿಆರ್‌ಪಿಸಿ, ಏನು ಇದೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇಲ್ಲಾ ತಾವು ಇದರ ಬಗ್ಗೆ ಒಂದು ಎನ್‌ಕ್ವಯರಿ ಆರ್ಡರ್ ಮಾಡಬೇಕು. ಎನ್‌ಕ್ವಯರಿ ಆಗಬೇಕು, ಸತ್ಯ ಹೊರಗೆ ಬರಬೇಕು, ಜನತೆಗೆ ಗೊತ್ತಾಗಬೇಕು, ಜನಾರ್ಧನರೆಡ್ಡಿಯವರು ಸುಳ್ಳು ಹೇಳಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಸತ್ಯ ಇದ್ದರೆ ಮುಖ್ಯಮಂತ್ರಿಗಳು ತಲೆ ಬಗ್ಗಿಸಬೇಕಾಗುತ್ತದೆ. ಹೀಗಾಗಿ ಇದರ ಬಗ್ಗೆ ವಿವರವಾಗಿ ಚರ್ಚೆಯಾಗಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ತಮ್ಮ ಪೀಠಕ್ಕೆ ಗೌರವ ಕೊಟ್ಟು ಒಂದು ಮಾತು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಸಾಧ್ಯವಾದಷ್ಟು ಮಾತನಾಡುತ್ತಿಲ್ಲ ಅಗತ್ಯ ಇದ್ದಾಗ ಮಾತ್ರ ಮಾತನಾಡುತ್ತೇನೆ. ಪ್ರಶ್ನೆ ಏನು? ತಾವು ಒಂದು ರೂಲಿಂಗ್ ಕೊಟ್ಟಿದ್ದಿರಿ, ಅದನ್ನು ಪುನರ್ ಪರಿಶೀಲನೆ ಮಾಡಿ ಎಂದು ಅವರು ಕೇಳುವುದಕ್ಕೆ ಅವಕಾಶ ಇದೆ, ಅನೇಕ ಬಾರಿ ಇಲ್ಲಿ ಚರ್ಚೆಯಾಗಿದೆ. ತಾವು ಒಂದು ಸಲ ರೂಲಿಂಗ್ ಕೊಟ್ಟ ಮೇಲೆ, ಪುನರ್ ಪರಿಶೀಲನೆ ಮಾಡಿದ್ದೇನೆ ಚರ್ಚೆಗೆ ಎಂದು ತಾವು ಹೇಳಿದರೆ ನಾವು ಒಪ್ಪುತ್ತೇವೆ. ಹೊರಗಡೆ ಯಾರೋ ಪತ್ರಿಕಾ ಹೇಳಿಕೆ ಕೊಟ್ಟಿದ್ದರ ಬಗ್ಗೆ ನೀವು ಒಂದು ರೂಲಿಂಗ್ ಕೊಟ್ಟು, ಅನೇಕ ರೂಲಿಂಗ್‌ಗಳು ಇಲ್ಲಿ ಇವೆ. ಚರ್ಚೆಗೆ ಅವಕಾಶವಿಲ್ಲವೆಂದು ಹೇಳಿದರು, ಸ್ಪಷ್ಟವಾಗಿ ನೀವು ರೂಲಿಂಗ್ ಕೊಟ್ಟ ಮೇಲೂ ಸಹ ಮತ್ತೆ ಮತ್ತೆ ಅದೇ ವಿವಾದವನ್ನು ಮಾತನಾಡಲಿಕ್ಕೆ ತಾವು ಅವಕಾಶ ಮಾಡಿಕೊಟ್ಟರೆ ಇದು ಪದ್ಧತಿಯಾಗುವುದಿಲ್ಲ, ಇದು ಸತ್‌ಸಂಪ್ರದಾಯವಾಗುವುದಿಲ್ಲ. ದಯಮಾಡಿ ಇದನ್ನು ಕೊನೆ ಮಾಡಿ ಉಳಿದಂಥ ವಿಚಾರವನ್ನು ತೆಗೆದುಕೊಳ್ಳಬೇಕೇ ಹೊರತು ಬೇರೆ ಮಾಡಬಾರದು, ಇಲ್ಲಾಂದ್ರೆ ತಮ್ಮ ರೂಲಿಂಗ್ ಏನು ಇದೆ ಎನ್ನುವುದರ ಬಗ್ಗೆ ಆಡಳಿತ ಪಕ್ಷದ ಸದಸ್ಯರಿಗೆ ತಾವು ಸ್ಪಷ್ಟಪಡಿಸಬೇಕು.

ಶ್ರೀ ಆರ್.ವಿ. ದೇಶಪಾಂಡೆ: ನಾವೇನೂ ನಿಮ್ಮ ಮೇಲೆ ಆರೋಪ ಮಾಡಿಲ್ಲ. ಆದರೆ, ನೀವು ಈ ಸ್ಥಾನದಲ್ಲಿದ್ದರೆ ಇವತ್ತಿನ ದಿವಸ ಹರಾಜು ಹಾಕುತ್ತಿದ್ದೀರಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಆಗಲೇ ನಾನು ಮಾತನಾಡುವುದಕ್ಕೆ ಹೊರಟೆ, ಆದರೆ ನೀವು ನನಗೆ ಅವಕಾಶ

ಕೊಡಲಿಲ್ಲ. ನಾನು ಕುಳಿತುಕೊಳ್ಳಬೇಕೆಂದು ತಾವು ಹೇಳಿದ್ದಕ್ಕೆ ನಾನು ಆ ಸಂದರ್ಭದಲ್ಲಿ ಕುಳಿತುಕೊಂಡೆ. ನಾನು ಈ ಸಂದರ್ಭದಲ್ಲಿ ಹೇಳತಕ್ಕಂಥದ್ದು ಏನೆಂದರೆ, ಇಲ್ಲಿಗೆ ಸಂಬಂಧಪಟ್ಟಂತೆ ಒಂದು ನಿಯಮಾವಳಿಗಳನ್ನು ರಚನೆ ಮಾಡಲಾಗಿದೆ. ಇದರ ಪ್ರಕಾರ ವಿಧಾನ ಪರಿಷತ್ತಿನ ಸದಸ್ಯರು ಯಾವ ಪಕ್ಷಕ್ಕೇ ಸೇರಿರಲಿ, ನನ್ನ ಮೇಲೆ ಮಾಡಿರತಕ್ಕಂಥ ಆಪಾದನೆ ಬಗ್ಗೆ ನನ್ನ ಹತ್ತಿರ ಮಾಹಿತಿಗಳನ್ನು ಇಟ್ಟುಕೊಂಡಿದ್ದೇವೆಂದು ಹೇಳಿದ್ದಾರೆ. ಇವತ್ತಿನ ದಿವಸ ನೀವು ಇಲ್ಲಿ ಮಾಡಿರತಕ್ಕಂಥ ನಿಯಮಾವಳಿಯ ಪ್ರಕಾರ ಅಂದರೆ ವಿಧಾನಸಭೆ ಇರಬಹುದು ಅಥವಾ ವಿಧಾನಪರಿಷತ್ ಇರಬಹುದು. ಅವರ ಹತ್ತಿರ ಇರತಕ್ಕಂಥ ಮಾಹಿತಿಗಳನ್ನು ಅವರು ವಿಧಾನ ಪರಿಷತ್ತಿನ ಸದಸ್ಯರಾಗಿರುವುದರಿಂದ ವಿಧಾನ ಪರಿಷತ್ತಿನ ಸಭಾಪತಿಗಳ ಮುಂದೆ ಮಂಡನೆ ಮಾಡಿದ ನಂತರ ಮಾನ್ಯ ಸಭಾಪತಿಗಳು ಅದರ ಬಗ್ಗೆ ಒಂದು ತೀರ್ಮಾನ ಮಾಡಬೇಕಾಗುತ್ತದೆ. ಆದರೆ, ನೀವು ಇಲ್ಲಿ ಒಂದು ರೂಲಿಂಗ್ ಕೊಟ್ಟಿದ್ದೀರಿ. ಇವತ್ತು ಆಪಾದನೆಗಳನ್ನು ಮಾಡತಕ್ಕಂಥದ್ದು ಸುಲಭ. ಆದರೆ, ಅದನ್ನು ಅರಗಿಸಿಕೊಳ್ಳತಕ್ಕಂಥದ್ದು ಕಷ್ಟ ಇದೆ. ಇವತ್ತು ಈ ಜಾಗದಲ್ಲಿ ಕುಳಿತು ಕೆಲಸ ಮಾಡಿರತಕ್ಕಂಥವರ ಮೇಲೆ ಅಂದರೆ ರಾಜ್ಯ ಅಥವಾ ರಾಷ್ಟ್ರಮಟ್ಟದಲ್ಲಿರಬಹುದು. ಹಲವಾರು ಜನರ ಮೇಲೆ ಯಾವ್ಯಾವ ಆಪಾದನೆಗಳು ಬಂದಿವೆ, ಅವು ಏನೇನು ಆಗಿವೆ ಎಂಬುದರ ಬಗ್ಗೆ ನಾನು ಇಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಎಲ್ಲದಕೂ ಸಿದ್ದನಿದ್ದೇನೆ. ಇವತ್ತು ಅವರು ಅಷ್ಟೊಂದು ಆತ್ಮ ವಿಶ್ವಾಸದಲ್ಲಿ ಏನು ಹೇಳುತ್ತಿದ್ದಾರೆ, ಅದಕ್ಕೆ ನಾನು ಈಗಾಗಲೇ ಒಂದು ಮಾತನ್ನು ಹೇಳಿದ್ದೇನೆ. ಅದೇನೆಂದರೆ, ನಾನು ನನ್ನ ಸದಸ್ಯರ ಸಂಖ್ಯಾಬಲದ ಮೇಲೆ ಶೆಲ್ಟರ್‌ನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲವೆಂದು ಹೇಳಿದ್ದೇನೆ. ಇವತ್ತು ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ವಿಧಾನ ಪರಿಷತ್ತಿನ ಸದಸ್ಯರು ಮಾಡಿರತಕ್ಕಂಥ ಆಪಾದನೆ ಏನಿದೆ, ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ಮಾಹಿತಿಗಳಿವೆ ಎಂದು ಏನು ಹೇಳಿದ್ದಾರೆಂಬುದು ಮತ್ತು ಈ ಒಂದು ವಿಷಯವನ್ನು ಪ್ರಾರಂಭ ಮಾಡಿದ ಹಿನ್ನೆಲೆ ಹಾಗೂ ತಾವುಗಳು ಏನು ಹೇಳಿದ್ದೀರೆಂಬುದು ಅಂದರೆ ಒಬ್ಬ ಜಿಲ್ಲಾ ಪೊಲೀಸ್ ಅಧಿಕಾರಿಯನ್ನು ವರ್ಗಾವಣೆ ಮಾಡಿದ ನಂತರ 'ಈ ಒಂದು ಆಪಾದನೆ ಏನು ಮಾಡಿದ್ದಾರೆ ಮತ್ತು ಈ ರೀತಿಯಾಗಿ ಆಪಾದನೆ ಮಾಡಿರತಕ್ಕಂಥ ಹಿನ್ನಲೆ ಏನಿದೆ ಇದರ ಬಗ್ಗೆ ಇಲ್ಲಿ ಎಲ್ಲಾ ಚರ್ಚೆ ಮಾಡಿರತಕ್ಕಂಥದರ ಬಗ್ಗೆ ತಾವು ಈಗಾಗಲೇ ಒಂದು ರೂಲಿಂಗ್ ಕೊಟ್ಟಿದ್ದೀರಿ. ಮತ್ತೆ ಅವರು ಮಾಡಿರತಕ್ಕಂಥ ಆಪಾದನೆ ಬಗ್ಗೆ ಈಗಾಗಲೇ ಕ್ರಿಮಿನಲ್ ಕೇಸ್‌ನ್ನು ಈ ಸರ್ಕಾರ ಅವರ ಮೇಲೆ ಹೂಡಬೇಕಾಗಿತ್ತು ಇಷ್ಟು ಹೊತ್ತಿಗೆಂದು ಮಾನ್ಯ ರಮೇಶ್ ಕುಮಾರ್‌ರವರು ಈಗ ತಾನೇ ಹೇಳಿದ್ದಾರೆ. ಅದಕ್ಕೆ ಸಮಯ ಇದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನೇನು

ಆತುರದಲ್ಲಿ ಏನಿಲ್ಲ. ಇದಕ್ಕೆ ಸಂಬಂಧಪಟ್ಟಂಥ ಮಾಹಿತಿಗಳೆಲ್ಲವನ್ನೂ ಮಾನ್ಯ ಸಭಾಪತಿಯವರ ಮುಂದೆ ಇಡತಕ್ಕಂಥ ಕರ್ತವ್ಯ ವಿಧಾನ ಪರಿಷತ್ತಿನ ಆ ಸದಸ್ಯರಿಗೆ ಇದೆ. ಈ ಎಲ್ಲ ಮಾಹಿತಿಗಳನ್ನು ಇಟ್ಟ ನಂತರ ಆ ಮಾಹಿತಿಗಳೆಲ್ಲವನ್ನೂ ತರಿಸಿ ಈ ಸದನದಲ್ಲಿಯೂ ಕೂಡ ಚರ್ಚೆ ಮಾಡಬೇಕೆಂದು ತಾವೂ ಕೂಡ ಹೇಳುತ್ತಿದ್ದೀರಿ. ಇವತ್ತಿನ ದಿವಸ ಮುಖ್ಯ ಮಂತ್ರಿಯಾಗಿ ಜವಾಬ್ದಾರಿಯನ್ನು ನಿರ್ವಹಿಸಬೇಕಾದರೆ ಮತ್ತು ಮುಖ್ಯಮಂತ್ರಿಯ ಮೇಲೆ ಕಳಂಕವನ್ನು ಹೊರಿಸಕ್ಕಂಥ ಸನ್ನಿವೇಶ ಏನಿದೆ ಇದರ ಬಗ್ಗೆ ಅಂದರೆ ಮುಖ್ಯ ಮಂತ್ರಿಗಳ ಮೇಲೆ ಇರತಕ್ಕಂಥ ಆಪಾದನೆ ಮತ್ತು ಈ ಸದನದ ಗೌರವವನ್ನು ಉಳಿಸತಕ್ಕಂಥದ್ದು ನಮ್ಮೆಲ್ಲರ ಜವಾಬ್ದಾರಿ ಇದೆ ಎನ್ನತಕ್ಕಂಥ ಭಾವನೆ ಎಲ್ಲರಲ್ಲಿರತಕ್ಕಂಥದ್ದಕ್ಕೆ ನಾನು ಈ ಸಂದರ್ಭದಲ್ಲಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಈ ವಿಷಯದ ಬಗ್ಗೆ ನಮ್ಮ ನಿಯಮಾವಳಿ ಪ್ರಕಾರ ತೀರ್ಮಾನ ಮಾಡಿ. 150 ಕೋಟಿ ಅಥವಾ ಇನ್ನೂ ಎಷ್ಟೆಷ್ಟು ಇದೆಯೋ ನೋಡೋಣ. ಇವೆಲ್ಲಾ ಬರಲಿ ನಾನು ಇದಕ್ಕೆಲ್ಲಾ ಉತ್ತರ ಕೊಡುವುದಕ್ಕೆ ಸಮರ್ಥನಿದ್ದೇನೆ. ಯಾವುದೇ ಕಾರಣಕ್ಕೂ ನಾನು ಹಿಂದೆ ಹೋಗತಕ್ಕಂಥ ಪ್ರಶ್ನೆ ಇಲ್ಲ. ಹಿಂದೆಯೂ ಕೂಡ ಈ ರೀತಿಯಾಗಿ ನಡೆದಿದೆ. ಇಲ್ಲಿ ಮುಖ್ಯಮಂತ್ರಿ ಆಗಿ ಕೆಲಸ ಮಾಡಿದಂಥ ವ್ಯಕ್ತಿಗಳ ಬಗ್ಗೆ ಆವತ್ತು ಏನು ಕೆಲವು ರಿಪೋರ್ಟ್‌ಗಳನ್ನು ಕೊಟ್ಟು ನಮ್ಮ ಪಕ್ಷದವರೇ ನಡೆಸಿರತಕ್ಕಂಥದ್ದು ಇದೆ. ಅಂದರೆ ಆವತ್ತೂ ಕೂಡ ಆಪಾದನೆಗಳನ್ನು ಮಾಡಿದ್ದಾರೆ. ಆದ್ದರಿಂದ ಇದೇನೂ ಹೊಸದೇನಲ್ಲ. ರಾಜಕಾರಣದಲ್ಲಿ ಪ್ರಮುಖ ಜವಾಬ್ದಾರಿ ಸ್ಥಾನದಲ್ಲಿರತಕ್ಕಂತ ಪ್ರತಿಯೊಬ್ಬರ ಮೇಲೂ ಕೂಡ ಆಪಾದನೆಗಳು ಬರತಕ್ಕಂಥದ್ದು ಸರ್ವೆ ಸಾಮಾನ್ಯ. ಇದಕ್ಕೆ ಉತ್ತರ ಕೊಡುವುದಕ್ಕೆ ನಾನು ಸಮರ್ಥನಾಗಿದ್ದೇನೆ. ಈ ವಿಷಯದ ಬಗ್ಗೆ ಇಲ್ಲಿಯ ಸದಸ್ಯರ ಹತ್ತಿರ ಏನಾದರೂ ಮಾಹಿತಿ ಇದ್ದರೆ ಅದನ್ನು ತಮ್ಮ ಮುಂದೆ ಇಡಲಿ. ಮತ್ತೆ ಅದರ ಬಗ್ಗೆ ಚರ್ಚೆಯಾಗಲಿ. ಆ ಮಾಹಿತಿಗಳಲ್ಲಿ ಏನಾದರೂ ಅಂದರೆ ಅಲ್ಪಸ್ವಲ್ಪ ಮಟ್ಟಿಗೆ ನಿಜಾಂಶ ಇದ್ದರೆ, ಅದರ ಬಗ್ಗೆ ಸದನದಲ್ಲಿ ಚರ್ಚೆಯನ್ನು ಪ್ರಾರಂಭ ಮಾಡಬಹುದು. ಇದಕ್ಕಿಂಥ ನಾನು ಹೆಚ್ಚಿಗೆ ಏನನ್ನೂ ಹೇಳುವುದಕ್ಕೆ ಆಗುವುದಿಲ್ಲ. ಮತ್ತೆ ಇದರ ಬಗ್ಗೆ ತಾವು ರೂಲಿಂಗ್‌ನ್ನೂ ಸಹ ಕೊಟ್ಟಿದ್ದೀರಿ. ಇದರ ಬಗ್ಗೆ ಯಾರಾದರೂ ಸದಸ್ಯರು ಮಾಹಿತಿಗಳನ್ನು ಕೊಡುವುದಕ್ಕೆ ಸಿದ್ದವಿದ್ದರೆ ಕೊಡಲಿ. ಆನಂತರ ತಾವು ಇದರ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಬಹುದು.

ಅಧ್ಯಕ್ಷರು: ನಾನು ಈಗಾಗಲೇ ನನ್ನ ತೀರ್ಪನ್ನು ಕೊಟ್ಟಿದ್ದೇನೆ. ಇದರ ಎಲ್ಲಾ ವಿಚಾರಗಳನ್ನು ನಾನು ಪರಿಗಣಿಸಿಯೇ ಈ ಒಂದು ತೀರ್ಪನ್ನು ನಾನು ಈಗಾಗಲೇ ಕೊಟ್ಟಿದ್ದೇನೆ. ಆದ್ದರಿಂದ ಆ ತೀರ್ಪನ್ನು ಮತ್ತೆ ಪುನರ್ ವಿಮರ್ಶೆ ಮಾಡತಕ್ಕಂಥ ಅಗತ್ಯತೆ ಇಲ್ಲವೆಂದು ನಾನು ಭಾವಿಸಿದ್ದೇನೆ. ಆದ್ದರಿಂದ ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ಈಗ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳುತ್ತೇನೆ. ದಯಮಾಡಿ ಎಲ್ಲರೂ ಸಹಕರಿಸಿ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ತಾವು ಬಹಳ ತರಾತುರಿಯಲ್ಲಿದ್ದೀರಿ.

ಅಧ್ಯಕ್ಷರು: ಕಾಗದ ಪತ್ರ ಮಂಡನೆ ಮಾಡುತ್ತಾರೆ.

ಶ್ರೀ ಎನ್. ಧರ್ಮಸಿಂಗ್: ನಾನು ಮಾತನಾಡಿದ ಮೇಲೆ ಕಾಗದ ಪತ್ರಗಳನ್ನು ಮಂಡನೆ ಮಾಡಬಹುದು. ನಾವೇನೂ ಹಗುರವಾಗಿ ಈ ಒಂದು ನಿಲುವಳಿ ಸೂಚನೆಯನ್ನು ತಂದಿಲ್ಲ. ಇದರ ಬಗ್ಗೆ ಮುಂಜಾನೆ ನಾನು ಮತ್ತು ನಮ್ಮ ಹಿರಿಯ ಸದಸ್ಯರೆಲ್ಲರೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಮೇಲೆ ನಮ್ಮ ಕಾಂಗ್ರೆಸ್ ಪಕ್ಷದ ಕಡೆಯಿಂದ ಆರೋಪ ಮಾಡತಕ್ಕಂಥದ್ದು ಇಲ್ಲ. ನಮ್ಮ ರಾಜ್ಯದಲ್ಲಿ ಎರಡು ಮಿತ್ರ ಪಕ್ಷಗಳೆರಡು ಕೂಡ ಏನು ಸರ್ಕಾರ ನಡೆಸುತ್ತಿದ್ದು, ಅವರ ಪಕ್ಷದ ವಿಧಾನ ಪರಿಷತ್ತಿನ ಸದಸ್ಯರು ವಿಧಾನ ಪರಿಷತ್ತಿನಲ್ಲಿ ಅಲ್ಲದೆ ಮೇಲಿಂದ ಮೇಲೆ ಇದರ ಬಗ್ಗೆ ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಮತ್ತೆ ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆಯಲ್ಲಿ 150 ಕೋಟಿ ರೂಪಾಯಿಗಳಷ್ಟು ಅವ್ಯವಹಾರ ಆಗಿದೆ ಎನ್ನತಕ್ಕಂತ ಮಾತನ್ನೂ ಕೂಡ ಹೇಳಿದ್ದಾರೆ. ಅವರು ಜಿಲ್ಲೆಯ ಬಿಜೆಪಿ ಅಧ್ಯಕ್ಷರು ಕೂಡ ಆಗಿದ್ದಾರೆ. ಮತ್ತೆ ಇದರ ಬಗ್ಗೆ ಕೋ-ಆರ್ಡಿನೇಷನ್ ಕಮಿಟಿಯಲ್ಲಿ ಇತ್ಯರ್ಥ ಮಾಡುತ್ತೇವೆಂದು ಮಾನ್ಯ ಯಡಿಯೂರಪ್ಪನವರೂ ಕೂಡ ಹೇಳಿದ್ದಾರೆ. ಆದ್ದರಿಂದ ನಾನು ಕೇಳತಕ್ಕಂಥದ್ದು ಏನೆಂದರೆ, ಮಿತ್ರ ಪಕ್ಷಗಳ ಒಬ್ಬ ಜವಾಬ್ದಾರಿ ಹೊಂದಿರತಕ್ಕಂಥ ವಿಧಾನ ಪರಿಷತ್ತಿನ ಸದಸ್ಯರು ರಾಜ್ಯದ ಮುಖ್ಯಮಂತ್ರಿಗಳ ಮೇಲೆ ನೇರವಾಗಿ ಆಪಾದನೆ ಮಾಡಿದ್ದರಿಂದ ರಾಜ್ಯದ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಇದನ್ನು ಕೇಳತಕ್ಕಂಥ ಹಕ್ಕು ನಮಗೆ ಇದೆ. ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳ ಮೇಲೆ ನಾವೇನೂ ನೇರವಾಗಿ ಆಪಾದನೆ ಮಾಡುತ್ತಿಲ್ಲ. ಆದರೆ, ಇದರ ಬಗ್ಗೆ ಮಾನ್ಯ ಯಡಿಯೂರಪ್ಪನವರು ಅವರನ್ನು ಕರೆಸಿ ಏಕೆ ಕೇಳಬಾರದು? ನಾನು ಹೇಳಿಕೆ ಕೊಟ್ಟಿದ್ದೇನೆ ಮತ್ತು ನಾನು ಮಾಡಿರತಕ್ಕಂಥ ಆಪಾದನೆಗೆ ಐ ಸ್ಟಾಂಟ್ ಬೈ ಇಟ್ ಎಂದು ಹೇಳುತ್ತಿದ್ದಾರೆ. ಮತ್ತೆ ನಾನು ಹೇಳಿರತಕ್ಕಂಥದ್ದು ಸರಿ ಎಂದು ಇನ್ನೂ ಕೂಡ ಅವರು ಹೇಳುತ್ತಿದ್ದಾರೆ. ಮತ್ತೆ ನಾನು ಮಾನ್ಯ ಮುಖ್ಯಮಂತ್ರಿ ಅವರಲ್ಲಿ ಕೇಳತಕ್ಕಂಥದ್ದು ಏನೆಂದರೆ, ಅಂದರೆ ಅದು ಒಂದೇ ಸಂದರ್ಭ ಅಲ್ಲ. ನೈಸ್ ವಿಷಯ ಬಂದಾಗ ಏನು ಹೇಳಿದರೆಂದರೆ, ಒಬ್ಬ ಪತ್ರಕರ್ತ ಮತ್ತು ಮಾಜಿ ಮಂತ್ರಿಗಳು ಬಂದು ನನಗೆ ಲಂಚ ಕೊಡತಕ್ಕಂಥದ್ದಕ್ಕೆ ಪ್ರಯತ್ನ ಮಾಡಿದರೆಂದು, ಇದರ ಬಗ್ಗೆ ಬಹಳಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಲಂಚದ ವಿಷಯ ನಾನು ಪ್ರಸ್ತಾಪ ಮಾಡಿಲ್ಲ. ನನ್ನ ಜೊತೆ ಚರ್ಚೆ ಮಾಡುವುದಕ್ಕೆ ಬಂದಿದ್ದಾರೆಂಬ ಮಾತನ್ನು ಹೇಳಿದ್ದೇನೇ ಹೊರತು ಲಂಚ ಕೊಡುವುದಕ್ಕೆ ಬಂದಿದ್ದರೆಂದು ನಾನು

ಹೇಳಿಲ್ಲ. ಇದರ ಒಂದು ವಿಡಿಯೋ ಕ್ಲಿಪಿಂಗ್ಸ್ ಇದೆ. ತರಿಸಿ ನೋಡಬಹುದು. ಆದ್ದರಿಂದ ಈ ರೀತಿಯಾಗಿ ಲಘುವಾಗಿ ತಾವು ಮಾತನಾಡಬಾರದು. ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ವಿರೋಧ ಪಕ್ಷದ ನಾಯಕರು ಈ ರೀತಿಯಾಗಿ ಮಾತನಾಡತಕ್ಕಂಥದ್ದು ಸೂಕ್ತವಲ್ಲ. ವಿಡಿಯೋ ಕ್ಲಿಪಿಂಗ್ಸ್ ತೆಗೆಸಿ ನೋಡಿಸಿ.

ಶ್ರೀ ಎನ್. ಧರ್ಮಸಿಂಗ್: ನಾವು ಪ್ರಸ್ತಾಪ ಮಾಡಿದಾಗ ತಾವು ನಾನು ಹೇಳಿಲ್ಲವೆಂದು ಸದನದಲ್ಲಿ ಹೇಳಿದ್ದೀರಿ. ಮತ್ತೆ ಸಾರ್ವಜನಿಕವಾಗಿ ಚರ್ಚೆಯಾಗತಕ್ಕಂಥ ವಿಷಯಗಳ ಬಗ್ಗೆ ನಾವು ನಿಲುವಳಿ ಸೂಚನೆ ಮೇಲೆ ತಂದು 8 ದಿವಸಗಳಿಂದ ಇಲ್ಲಿ ಚರ್ಚೆಯಾಗುತ್ತಿದ್ದು, ಈ ವಿಷಯವನ್ನು ನಿಲುವಳಿ ಸೂಚನೆ ಮೇಲೆ ಪ್ರಸ್ತಾಪ ಮಾಡದೇ ಇನ್ನು ಯಾವ ವಿಷಯದ ಮೇಲೆ ಮಾತನಾಡಬೇಕು? ಆದರೆ ಈ ವಿಷಯವನ್ನು ಬೇಡಿಕೆಯ ಮೇಲೆ ಮಾತನಾಡಿ ಎಂದು ತಾವು ಹೇಳುತ್ತಿದ್ದೀರಿ. ನಾವು ಮುಖ್ಯಮಂತ್ರಿಗಳನ್ನು ಕೇಳಿದ್ದಕ್ಕೆ ನಾನು ಆ ರೀತಿ ಹೇಳಿಲ್ಲವೆಂದು ಹೇಳಿದರು. ಇವತ್ತಿನ ದಿವಸ ಮಾನ್ಯ ಜನಾರ್ಧನ ರೆಡ್ಡಿಯವರು ಏನೊಂದು ಹೇಳಿಕೆಯನ್ನು ಹೇಳಿದ್ದಾರೆ ಮತ್ತು ಗುರುತರವಾದ ಆಪಾದನೆಯನ್ನೂ ಕೂಡ ಮಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕೆಂದು ನಾವು ಕೇಳುತ್ತಿದ್ದೇವೆ. ಆದರೆ, ಇದಕ್ಕೆ ಅವಕಾಶ ಕೊಡುವುದಿಲ್ಲವೆಂಬ ಮಾತನ್ನು ಹೇಳಿದರೆ ನಾವು ವಿರೋಧಪಕ್ಷದಲ್ಲಿ ಕುಳಿತುಕೊಂಡು ಜನರ ಭಾವನೆಯಲ್ಲಿರತಕ್ಕಂಥ ವಿಚಾರಗಳನ್ನು ನಾವು ಎಲ್ಲಿ ಪ್ರಸ್ತಾಪ ಮಾಡಬೇಕು? ನೈಸ್ ವಿಚಾರದಲ್ಲಿಯೂ ಕೂಡ ಸಿಬಿಐ ತನಿಖೆ ಆಗಬೇಕೆಂದು ಹೇಳಿದ್ದೇವೆ ಮತ್ತೆ ಇದರ ಬಗ್ಗೆಯೂ ಕೂಡ ಸಮಗ್ರವಾಗಿ ಸಿಬಿಐ ಕಡೆಯಿಂದ ತನಿಖೆ ಆಗಬೇಕೆಂದು ನಮ್ಮ ಪಕ್ಷದ ಕಡೆಯಿಂದ ಒತ್ತಾಯ ಕೂಡ ಮಾಡಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಅವರು ಬೆಳಿಗ್ಗೆಯಿಂದ ಈ ವಿಷಯವನ್ನು ಹೇಳುತ್ತಲೇ ಇದ್ದಾರೆ. ಮತ್ತೆ ನೀವೂ ಕೂಡ ರೂಲಿಂಗ್‌ನ್ನು ಕೂಡ ಕೊಟ್ಟಿದ್ದೀರಿ.

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್: ನಿಮಗೆ ಇದರ ಬಗ್ಗೆ ಏನೂ ಗೊತ್ತಿಲ್ಲ. ಆದ್ದರಿಂದ ನೀವೇಕೆ ಮಾತನಾಡುತ್ತೀರಿ ಸುಮ್ಮನೆ ಇರಿ.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಮರು ಪರಿಶೀಲನೆ ಮಾಡಿ ಎಂದು ಎಷ್ಟು ಬಾರಿ ಕೇಳುವುದು? ಅವರು ಹೇಳಿದ್ದೇ ಹೇಳುತ್ತಿರುತ್ತಾರೆ. ಹೊಸದಾದ ವಿಷಯ ಇದ್ದರೆ ಹೌದಪ್ಪ ಎಂದು ಹೇಳಬಹುದು. ಬೆಳೆಗ್ಗೆಯಿಂದ ಒಂದೇ ಪ್ಲೇಟ್ ಹಾಕಿಕೊಂಡಿದ್ದಾರೆ. ಅದೇ ಪ್ಲೇಟನ್ನು ತಿರುವಿ ಹಾಕುತ್ತಲೇ ಇದ್ದಾರೆ. ಒಬ್ಬರು ಆದಮೇಲೆ ಒಬ್ಬರು ಆ ಪ್ಲೇಟನ್ನು ತಿರುವಿ ಹಾಕುತ್ತಿದ್ದಾರೆ.

(ಅಡಚಣೆ)

ಅಧ್ಯಕ್ಷರು: ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಅವರು ಒತ್ತಾಯ ಮಾಡಿರತಕ್ಕಂಥ ಪುನರ್‌ವಿಮರ್ಶೆಯ ಅಗತ್ಯತೆ ಇಲ್ಲವೆಂದು ಹೇಳಿದ್ದೇನೆ. ಈಗ ಅಜೆಂಡಾದಲ್ಲಿ ಇರತಕ್ಕಂಥ ವಿಷಯಗಳನ್ನು ತೆಗೆದುಕೊಳ್ಳೋಣವೆಂದೂ ಕೂಡ ಹೇಳಿದ್ದೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಸದನದ ಕಲಾಪಗಳನ್ನು ನಡೆಯುವುದಕ್ಕೆ ಅವಕಾಶ ಮಾಡಿಕೊಡಿ.

(ಅಡಚಣೆ)

ಶ್ರೀ ಎಸ್. ಶಿವಣ್ಣ: ಇವರೆಲ್ಲರೂ ಸತ್ಯ ಹರಿಶ್ಚಂದ್ರರೆಂದು ತಿಳಿದುಕೊಂಡಿದ್ದಾರೆ.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಅವರು ಬೆಳಿಗ್ಗೆ ತಂದಿರತಕ್ಕಂಥ ನಿಲುವಳಿ ಸೂಚನೆಗೆ ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದೀರಿ. ಮತ್ತೆ ಅವರು ಮರುಪರಿಶೀಲನೆಗೆ ಒತ್ತಾಯ ಮಾಡಿದರು. ಈ ರೀತಿ ಮಾಡುವುದಕ್ಕೆ ಅವರಿಗೆ ಅಧಿಕಾರ ಇದೆ. ಆದ್ದರಿಂದ ಅವರು ಮಾಡಿದ್ದಾರೆ. ಮತ್ತೆ ಅದು ಆದನಂತರ ಅವರು ಮಾತನಾಡಿದರು. ಅವರು ಮಾತನಾಡಿದ ನಂತರ ತಾವು ಮತ್ತೆ ರೂಲಿಂಗ್ ಕೊಟ್ಟಿದ್ದೀರಿ. ಮತ್ತೊಬ್ಬರು ಅವರ ಕಡೆಯಿಂದ ಮಾತನಾಡಿದರು. ಅವರೂ ಕೂಡ ಅದೇ ಮಾತನ್ನು ಹೇಳಿದರು. ಹೊಸದೇನೂ ಅದರಲ್ಲಿ ಇರಲಿಲ್ಲ. ಮತ್ತೆ ತಾವು ರೂಲಿಂಗ್ ಕೊಟ್ಟಿದ್ದೀರಿ. ಬೆಳಿಗ್ಗೆ ಇಷ್ಟು ಆದಮೇಲೆ ಮತ್ತೆ ಮಧ್ಯಾಹ್ನ ಮಾನ್ಯ ರಮೇಶ್ ಕುಮಾರ್‌ರವರು ಅದನ್ನೇ ಪ್ರಸ್ತಾಪ ಮಾಡಿದರು. ಮತ್ತೆ ಇದಕ್ಕೆ ತಾವು ರೂಲಿಂಗ್ ಕೊಟ್ಟಿದ್ದೀರಿ. ಆದ್ದರಿಂದ ನಾನು ಕೇಳುವುದೇನೆಂದರೆ ಒಂದು ನಿಲುವಳಿ ಸೂಚನೆಗೆ ಎಷ್ಟು ಬಾರಿ ರೂಲಿಂಗ್ ಕೊಡುತ್ತೀರಿ?

(ಅಡಚಣೆ)

ಅಧ್ಯಕ್ಷರು: ರೂಲಿಂಗ್ ಒಂದೇ ಇದನ್ನು ಮತ್ತೆ ಪುನರ್ ಪರಿಶೀಲನೆ ಮಾಡತಕ್ಕಂಥ ಅಗತ್ಯತೆ ಇಲ್ಲವೆಂದು ಹೇಳಿದ್ದೇನೆ. ತಾವು ದಯಮಾಡಿ ಕುಳಿತುಕೊಳ್ಳಿ.

(ಅಡಚಣೆ)

ಅಧ್ಯಕ್ಷರು: ಆಯಿತು, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಖರ್ಗೆ ಸಾಹೇಬರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಿತ್ರರು ಹೇಳಿರುವುದನ್ನು ನಾನೆಲ್ಲವನ್ನೂ ಕೇಳಿದ್ದೇನೆ. ಪುನರ್ ವಿಮರ್ಶೆ ಮಾಡುವ ಅಗತ್ಯವಿಲ್ಲ, ತಾವೂ ಕೂಡ ಬೆಳಿಗ್ಗೆ ಮಾತನಾಡಿದ್ದೀರಿ. ಬೇಕಾದಷ್ಟು ರೂಲಿಂಗ್ಸ್ ಇದೆ, ತಮಗೆ ಕೊಟ್ಟಿರತಕ್ಕಂಥದ್ದರಲ್ಲಿ ಕೋಟ್ ಮಾಡಿರುತ್ತೇನೆ. ನಾನು ಎಲ್ಲಾ ಆಯಾಮಗಳನ್ನು ನೋಡಿಯೇ ತೀರ್ಪನ್ನು ಕೊಟ್ಟಿದ್ದೇನೆ. ದಯಮಾಡಿ ಈಗ ಮುಂದಿನ ವಿಷಯಕ್ಕೆ ಹೋಗುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಏಕೆಂದರೆ ಇದನ್ನು ಅಷ್ಟು ಹಗುರವಾಗಿ ತೆಗೆದುಕೊಳ್ಳತಕ್ಕಂಥದ್ದಲ್ಲ.

ಅಧ್ಯಕ್ಷರು: ಇಲ್ಲವೆಂದು ನಾನು ಹೇಳುವುದಿಲ್ಲ. ಎಲ್ಲಾ ಕೇಳಿ ಆದ ಮೇಲೆ ನಾನು ತೀರ್ಪನ್ನು ಕೊಟ್ಟು ಬಿಟ್ಟಿದ್ದೇನೆ. ಪುನರ್‌ವಿಮರ್ಶೆ ಮಾಡುವ ಅಗತ್ಯವಿಲ್ಲ. ದಯಮಾಡಿ ಸಹಕರಿಸಿ.

(ಅಡಚಣೆ)

ಶ್ರೀ ಸಿ. ಚನ್ನಿಗಪ್ಪ (ಅರಣ್ಯ ಸಚಿವರು): ಇವರು ಏಕೆ ನಿಲುವಳಿ ಸೂಚನೆಯನ್ನು ತಂದಿಲ್ಲ? ನೈಸ್ ಕಂಪನಿಯ ಬಗ್ಗೆ ಇವರು ಏಕೆ ನಿಲುವಳಿ ಸೂಚನೆಯನ್ನು ತರಲಿಲ್ಲ? ರೂಲ್ಸ್ ಬಗ್ಗೆ ಇವರಿಗೆ ಯಾರಿಗೂ ವಿಶ್ವಾಸವಿಲ್ಲವೆ? ರಾಜ್ಯದ ಜನತೆಗೆ ಗೊತ್ತಿಲ್ಲವೆ. ಮಾನ್ಯ ವಿರೋಧ ಪಕ್ಷದ ನಾಯಕರ ಜವಾಬ್ದಾರಿ ಆವತ್ತು ಏನಾಗಿತ್ತು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಬಸವಲಿಂಗಪ್ಪನವರು ಸಾಹಿತ್ಯದ ಬಗ್ಗೆ ಮಾತನಾಡಿದರೆಂದು ರೆಸಿಗ್ನೇಶನ್ ಕೊಡಬೇಕಾಗಿತ್ತು. ದೇವೇಂದ್ರಪ್ಪ ಗಾಳಪ್ಪರವರಿಗೆ ಪತ್ರಿಕೆಯಲ್ಲಿ ಬಂದಿದೆ ಎಂದು ರಾಜೀನಾಮೆ ಕೊಡಲಿಕ್ಕೆ ಹಚ್ಚಿದರು. ಕಿತ್ತೂರ್‌ರವರಿಗೆ ರಾಜೀನಾಮೆ ಕೊಡಲಿಕ್ಕೆ ಹಚ್ಚಿದರು. ಯಾವ ಪ್ರೂಫ್ ಇರಲಿಲ್ಲ. ಆಗ ವಿರೋಧ ಪಕ್ಷದವರು ಯಾರಿದ್ದರು? ಇವತ್ತು ಟಿವಿ ಮತ್ತು ಪತ್ರಿಕೆಯಲ್ಲಿ ಖುದ್ದಾಗಿ ಸ್ವಂತ ಜೀವಂತವಾಗಿದ್ದು ಹೇಳಿಕೆಯನ್ನು ನೀಡಿದ್ದಾರೆ. ಅದಕ್ಕೆ ಡಿನೈ ಇನ್ನೂವರೆಗೆ ಮಾಡಿಲ್ಲ. ಎಂ.ಪಿಯವರು ಹಾಗೂ ಮಿನಿಸ್ಟರ್‌ರವರು ಪುಷ್ಟೀಕರಿಸಿದ್ದಾರೆ.

(ಅಡಚಣೆ)

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ತೀರ್ಪನ್ನು ಕೊಟ್ಟಿದ್ದೀರಿ. ಮತ್ತೆ ಮತ್ತೆ ಅವರು ಅದೇ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ತಾವು ಈಗಾಗಲೇ ರೂಲಿಂಗ್‌ನ್ನು ಕೊಟ್ಟಿದ್ದೀರಿ. ಅದನ್ನು ಪುನರ್‌ವಿಮರ್ಶೆ ಮಾಡುವುದಿಲ್ಲವೆನ್ನುವ ಮಾತನ್ನು ಕೂಡ ಹೇಳಿದ್ದೀರಿ.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅದರ ಬಗ್ಗೆ ನೀವು ಆಳವಾಗಿ ಎನ್‌ಕ್ವಯರಿ ಮಾಡಿಸುವುದಕ್ಕೆ ಆರ್ಡರ್ ಕೊಟ್ಟರೆ ಮಾತ್ರ ಆಗುತ್ತದೆ. ಅದನ್ನು ಬಿಟ್ಟು ಅದರಲ್ಲಿ ಏನೂ ಇಲ್ಲ, ಹೀಗೆಲ್ಲಾ ಆಪಾದನೆಗಳು ಬಹಳಷ್ಟು ಬರುತ್ತವೆ. ಅಂದರೆ ಅದು ಸರಿಯಾಗುವುದಿಲ್ಲ. ಆಪಾದನೆಯನ್ನು ನಿಮ್ಮ ಮಿತ್ರ ಪಕ್ಷದವರೇ ಮಾಡಿದ್ದಾರೆ. ಅದು ಸುಳ್ಳಾ? ಆಪಾದನೆಯನ್ನು ನಿಮ್ಮ ಎಂಎಲ್‌ಸಿಯವರೇ ಮಾಡಿದ್ದಾರೆ. ಅದು ಸುಳ್ಳಾ?

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆಯಿಂದ ಇದನ್ನೇ ಕೇಳಿ ಕೇಳಿ ಸಾಕಾಗಿರುತ್ತದೆ. 10 ಬಾರಿ ರೂಲಿಂಗ್‌ನ್ನು ಕೊಟ್ಟಿದ್ದೀರಾ?

(ಅಡಚಣೆ)

ಅಧ್ಯಕ್ಷರು: ಪುನರ್‌ವಿಮರ್ಶೆ ಮಾಡತಕ್ಕಂಥ ಅಗತ್ಯವಿಲ್ಲ. ತಾವು ಬೇಡಿಕೆಯ ಮೇಲೆ ಚರ್ಚೆ ಮಾಡಬಹುದು. ಎಲ್ಲಾ ಬೇಡಿಕೆಗಳು ಇವತ್ತು ಅಜೆಂಡಾದಲ್ಲಿದ್ದಾವೆ.

ಶ್ರೀ ಎಂ.ಪಿ. ಪ್ರಕಾಶ್: ಅವರು ಕಿತ್ತೂರ್‌ರವರ ಉದಾಹರಣೆಯನ್ನು ಹೇಳಿದರು. ಬಸವಲಿಂಗಪ್ಪನವರ ಉದಾಹರಣೆಯನ್ನು ಹೇಳಿದರು. ನಿವೃತ್ತ ಪೊಲೀಸ್ ಅಧಿಕಾರಿ ದಿನಕರ್‌ರವರು ಗುರುತರವಾದ ಆಪಾದನೆಯನ್ನು ಮಾಡಿ ಪುಸ್ತಕವನ್ನೇ ಬರೆದರು. ಇಡೀ ಪ್ರಪಂಚದಲ್ಲಿ ಇದರ ಬಗೆ ಚರ್ಚೆಯಾಯಿತು. ಆದರೂ ಕೂಡ ಯಾರೂ ಅವರ ಮೇಲೆ ಕ್ರಮ ಕೈಗೊಳ್ಳಲಿಲ್ಲ. ಕಿತ್ತೂರ್‌ರವರ ಬಗ್ಗೆ ಹೇಳುತ್ತಿದ್ದಾರೆ. ಆದರೆ ನಿವೃತ್ತ ಪೊಲೀಸ್ ಅಧಿಕಾರಿ ದಿನಕರ್‌ರವರು ನಿರ್ದಿಷ್ಟ ಆಪಾದನೆಗಳನ್ನು ನಿರ್ದಿಷ್ಟವಾದ ದಾಖಲೆಗಳ ಮೂಲಕ ಪುಸ್ತಕವನ್ನೇ ಬರೆದರು. ಆದರೂ ಕೂಡ ಅವರ ಮೇಲೆ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಕ್ರಮವನ್ನು ಕೈಗೊಳ್ಳದೆ ಇರತಕ್ಕಂಥದ್ದು ನಾವು ಕ್ರಮ ಕೈಗೊಳ್ಳುತ್ತೇವೆ. ಅದಕ್ಕೆ ಕಾಲಾವಕಾಶಬೇಕು.

ಅಧ್ಯಕ್ಷರು: ಬೇಡಿಕೆ ಮೇಲೆ ಚರ್ಚೆಗೆ ಅವಕಾಶ ಇದೆ ಮಾತನಾಡಿ, ನಿಮ್ಮ ವಿಷಯವನ್ನು ಪ್ರಸ್ತಾಪ ಮಾಡಬಹುದು.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾಗಿ ಘೋಷಣೆಗಳನ್ನು ಕೂಗುತ್ತಿದ್ದರು)

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು:

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2004ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಕರ್ನಾಟಕ ಸರ್ಕಾರದ (ಜಿಲ್ಲಾ ಪಂಚಾಯಿತಿಗಳು) ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

5. ವಿತ್ತೀಯ ಕಾರ್ಯಕಲಾಪಗಳು:

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ: 18 ರಿಂದ 25ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತೇನೆ."